


ಸಂಪುಟ ೭ | ಮಾರ್ಚಿ ೧೯೪೯ | ಸಂಚಿಕೆ ೧೨

**

# ಕುಹಕಿಡಿಗಳು

**

ಈ ಸಾರಿ ಶಿವರಾತ್ರಿಯೂ ಎಲ್ಲಾ ಮತಸ್ಥರಿಂದಲೂ ಬೆಂಗಳೂರಿನಲ್ಲಿ ಆಚರಿಸಲ್ಪಟ್ಟಿತಂತೆ.

—ಸರ್ದಾರ್ ಪಟೇಲರನ್ನು ನೋಡುವ ಪ್ರಯುಕ್ತ ಜನರು ಉಪವಾಸ ಇದ್ದು ಜಾಗರಣೆ ಮಾಡಿದರಂತೆ.

* * * *

ಸರ್ದಾರ್ ಪಟೇಲರು ಬಂದಾಗ ಅಖಿಲ ಕರ್ನಾಟಕ ರಾಜಪ್ರಮುಖರನ್ನು ಭೇಟಿಯಾಗುತ್ತಾರೆಂದಿದ್ದವರಿಗೆಲ್ಲಾ ನಿರಾಶೆ ಆಯಿತಂತೆ-ಸದ್ಯಕ್ಕೆ—

* * *

ಪಾಕಿಸ್ಥಾನ ಅಧಿಕಾರಿಗಳು ಗೋಲ್ವಾಲ್ಕರರಿಗೆ ಹಣ ಕೊಡುತ್ತಿದ್ದರು ಎಂಬುದು ಶುದ್ಧ ಸುಳ್ಳು ಮತ್ತು ಕುಹಕ.

ಮಾಸ್ಟರ್ ತಾರಾಸಿಂಗರಿಗೆ ಕೊಡುತ್ತಿದ್ದಾರೆ ಎನ್ನುವುದು ಅನ್ಯಾಯ ಅಪವಾದ ಎಂದು ಉತ್ತರ ಭಾರತದ ಪತ್ರಿಕೆಯಲ್ಲಿ ಬರಬಹುದಂತೆ.

* * *

"ಹೆಚ್ಚು ಆಹಾರ ಬೆಳೆಯಿರಿ"
ಪತ್ರಿಕೆಯ ಶಿರೋನಾಮೆ—

—ಯಾಕೆ ಎಲ್ಲಾ ಮಂತ್ರಿಗಳೂ ಭೇಟಿ ಕೊಡುತ್ತಾರೆಯೋ ?

* * *

ವೆಸ್ಟ್ ಇಂಡೀಸಿನವರು ಸಿಲೋನಿನ ಮೇಲೆ ಕ್ರಿಕೆಟ್ ಪಂದ್ಯ ಆಡಿದಾಗ ನಮ್ಮವರು ಹೇಳಿದರಂತೆ "ಭಾರತೀಯ ಆಟಗಾರರು ಅಷ್ಟು ಒಳ್ಳೇ ಆಟಗಾರರು" ಅಂತ ನಮಗೆ ಮೊದಲು ಗೊತ್ತೇ ಆಗಲಿಲ್ಲ ಅಂತ.

* * *

ಕೋಕಿಲ ಕಂಠೆಯರ ಚಿತ್ರಗಳನ್ನು ಬಹಿರಂಗವಾಗಿ ಶಾಲೆಯ ಹೊರಗಡೆ ಪ್ರದರ್ಶಿಸಬೇಕೆಂಬ ಸಲಹೆ ಬಂದಿದೆ.

—ಇವರುಗಳಿಗೆ ಮಾಕೆ ಬಂದರೆ ಹೇಗಿರುತ್ತಾರೆಂಬುದನ್ನು ತಿಳಿಯಲು ಇದು ಸಹಕಾರಿ.

* * * *

ಈ ಮುದ್ರಾರಾಕ್ಷಸನ ಹಾವಳಿ ಹೇಳತೀರದು—

— ಶ್ರೀಮತಿ......................ಯವರು ಭಾರದ ನಾಟ್ಯವನ್ನು ಪ್ರದರ್ಶಿಸಿದರು.

* * *

ಪೋಲೀಸ್ ಇಲಾಖೆಯವರ ಪ್ರದರ್ಶನವನ್ನು, ಕಾಂಗ್ರೆಸ್ ವಸ್ತುಪ್ರದರ್ಶನಾಲಯದಲ್ಲಿ, ನೋಡಿದ ಕಳ್ಳರಲ್ಲಿ ಅನೇಕರು ಏನಸ್ವಾಮಿ ನಮ್ಮ ಫೋಟೋ ಹಾಕಿಯೇ ಇಲ್ಲವಲ್ಲ ಎಂದುಕೊಂಡರಂತೆ.

* * * *

"ಮನೆಯನ್ನು ನೋಡಿದರೆ ಮಾಲೀಕನ ಚಹರೆ ತಿಳಿಯಬಹುದು" ಭಾಷಣ.

—ಶುದ್ಧ ಸುಳ್ಳು. ಹುಲ್ಲು ಜೋಪಡಿ ಮನೆಯಲ್ಲಿ ಭಟ್ಟಿತಳೆಯುವರೇ ಇರುವುದನ್ನು ನೋಡಿದ್ದೇವೆ.

* * * *

ಹಳೇ ಕೊರವಂಜಿ ಸಂಚಿಕೆಗಳು ಎಲ್ಲಿ ಸಿಗುತ್ತೆ ? ಎಂದು ವಾಚಕರೊಬ್ಬರು ಕೇಳಿದ್ದಾರೆ.

— ಹೋಟಲಿನಲ್ಲಿ, ತಿಂಡಿ ತಿಂದಮೇಲೆ ಅಂತ ಇನ್ನೊಬ್ಬರು ಉತ್ತರವನ್ನೂ ಬರೆದಿದ್ದಾರೆ.

* * *

# ಉರಿಗಾಳು

—o—

"ಮುಖ್ಯ ಅತಿಥಿಗಳು ಒಂದು ಸಣ್ಣ ಭಾಷಣ ಮಾಡಿದರು. ಅನಂತರ, ಸಂಘದ ಕಾರ್ಯದರ್ಶಿಗಳು ಅವರನ್ನು ಸಭೆಯ ಪರವಾಗಿ ವಂದಿಸಿದರು" (ವರದಿ) ಇನ್ನು ಮೇಲಾದರೂ, ದೀರ್ಘ ಭಾಷಣಗಳಿಗೆ ಧಿಕ್ಕಾರವಿರಲಿ.

* * *

ಆಹಾರದ ಹಂಚಿಕೆಯುವಸ್ಥೆ ಉತ್ತಮಗೊಳ್ಳದಿದ್ದರೆ, ಆಮರಣಾಂತ ಉಪವಾಸವನ್ನಾಚರಿಸಲು ಹಲವರು ಹವಣಿಸುತ್ತಿರುವರಂತೆ.

* * *

ಮೊನ್ನೆ ನಡೆದ ಒಂದು ಮದುವೆ ಸಮಾರಂಭದಲ್ಲಿ, ಲಗ್ನದ ಟೈಂನಲ್ಲಿ ವರನ ತಾಯಿ ಕಣ್ಣೀರು ಬಿಟ್ಟಳೆಂಬ ನೆಪದಿಂದ, ಬೀಗ ಬೀಗರಿಗೆ ವಿವಾದ ಹತ್ತಿತಂತೆ.

* * *

"ಪುರಜನರು ಬಿನ್ನವತ್ತಳೆಯನ್ನರ್ಪಿಸಿ ತಮ್ಮ ಅಗತ್ಯ ಬೇಡಿಕೆಗಳನ್ನು ಮಂತ್ರಿಗಳ ಅವಗಾಹನೆಗೆ ತಂದರು; ಅದನ್ನು ಸ್ವೀಕರಿಸಿ, ಮಂತ್ರಿಗಳು ಸಾಗರದ ಮಾರ್ಗವಾಗಿ ಜೋಗದ ಜಲಪಾತಕ್ಕೆ ಪ್ರಯಾಣ ಬೆಳೆಸಿದರು" ಬೇಡಿಕೆ ನೆರವೇರಿತೋ ಇಲ್ಲವೋ ಎಂಬುದು ಸ್ಪಷ್ಟವಾಗಲಿಲ್ಲ.

* * *

ತರುಣ ತರುಣಿಯರ ಕಲಾ ಕುಶಲತೆಯನ್ನು ಅಭಿವೃದ್ಧಿಗೊಳಿಸಲು ಶ್ರೀ ವಿ ನಾಗಯ್ಯನವರು ಬೆಂಗಳೂರಲ್ಲಿ ಒಂದು ಕಾಲೇಜನ್ನು ಸ್ಥಾಪಿಸಲಿರುವರಂತೆ... ಈಗಿನ ಕಾಲೇಜುಗಳಲ್ಲಿ ಅನೇಕರಿಗೆ ಇನ್ನು ಮುಂದೆ ಸೀಟು ಸುಲಭವಾಗಿ ದೊರೆಯಬಹುದು.

* * *

"ಲಕ್ಕವಳ್ಳಿ ಪ್ರಾಜೆಕ್ಟ್ ಪ್ರದೇಶದಿಂದ ಅಪಾರ ಚಿನ್ನವನ್ನು ತೆಗೆಯಬಹುದು" (ವರದಿ) ...ಚಿನ್ನಕ್ಕಿಂತ ಸದ್ಯಕ್ಕೆ ನಮಗೆ ಅನ್ನವೇ ಅವಶ್ಯಕ.

* * *

"ಇದು ಪ್ರಜಾ ಸತ್ತೆಯ ಯುಗ ! ದೇಶದ ಅಭಿವೃದ್ಧಿಯಲ್ಲಿ ತೊಡಗಿರುವವರೆಲ್ಲರಿಗೂ ನೀವು ನಿಮ್ಮ ಪಾಲಿನ ಮೇಲು ಸೇವೆಯನ್ನು ಸಲ್ಲಿಸಲು ಸಿದ್ಧರಾಗಿರಿ .. (ಭಾಷಣ) ಜನರನ್ನು ಪ್ರೇರಿಸಿ ಹೀಗೆ ಹೇಳಬಾರದೆಂದೇ ನಮ್ಮ ಅಭಿಪ್ರಾಯ.

•   •   •

ಗಂಡನನ್ನು ಬಿಡಲು ಹೆಂಡತಿಗೆ ಅವಕಾಶ ಒದಗಿಸುವ ಕಾನೂನನ್ನು ಕೇಂದ್ರ ಪಾರ್ಲಿಮೆಂಟು ಐದೇ ನಿಮಿಷಗಳ ಚರ್ಚೆಯಿಂದ ಅನುಮೋದಿಸಿತು—(ಸುದ್ದಿ; ಬಿಡುಗಡೆಯ ದಾಹ.

•   •   •

ಸಂಸಾರ ನಿರ್ವಹಿಸಬಲ್ಲ ಸಾಮರ್ಥ್ಯ ಇರುವವನಿಗೇನೆ ತಮ್ಮ ಮಗಳನ್ನು ಕೊಡುವುದು ಎಂದು ನಿರ್ಧರಿಸಿ ಅದರಂತೆ ವರನನ್ನು ಹುಡುಕಿ ನಿಶ್ಚಯಿಸಿದ ಒಬ್ಬ ತಂದೆ, ತಮ್ಮ ಎಂಟು ಜನ ಮಕ್ಕಳೊಂದಿಗೆ ಈಗ ಅಳಿಯನ ಮನೆಯಲ್ಲೇ ವಕ್ರಿಸಿ ಸುಖವಾಗಿದ್ದಾರಂತೆ.

•   •   •

"ಹುಲಿಯನ್ನು ರೈತರು ದೊಣ್ಣೆಗಳಿಂದ ಹೊಡೆದು ಸಾಯಿಸಿದರು" (ಸುದ್ದಿ) ...ರೇಷನ್ ಹುಲಿ ?

•   •   •

"ಭಾರತದ ಗಣಿ ಕೆಲಸಗಾರರಾದ ಹೆಂಗಸರಿಗೆ ಕೊಡೊ ದಿನಕೂಲಿ ಒಂದು ಪಾವು ಅಕ್ಕಿಯ ಬೆಲೆ" (ಲೂಯಿ ಫಿಷರ್) ..ನಮ್ಮೂರು ಮೇಷ್ಟರು ಇದನ್ನು ಕೇಳಿ ಹಣೆ ಚಚ್ಚಿಕೊಳ್ಳುತ್ತಿದ್ದಾರೆ.

•   •   •

"ರಜಾ ಚೀಟಿ: ಸ್ವಾಮಿ ! ನನ್ನ ಪೂಜ್ಯ ಅತ್ತೆ ಬೆಳಿಗ್ಗೆ ಸ್ವರ್ಗಸ್ಥರಾದರು. ನಾನು ಕೂಡಲೇ ಅಲ್ಲಿಗೆ ಹೋಗಬೇಕಾಗಿದೆ. ದಯೆ ಇಟ್ಟು ರಜಾ ಮಂಜೂರು ಮಾಡಬೇಕಾಗಿ ಕೋರುತ್ತೇನೆ."

•   •   •

"ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಧರ್ಮ ಎಂದರೇನು, ಅಧರ್ಮ ಎಂದರೆ ಯಾವುದು, ಈ ವಿಷಯದ ಪರಿಜ್ಞಾನವನ್ನು ಈಗ ಚೆನ್ನಾಗಿ ಕಲಿಸಬೇಕಾಗಿದೆ... ಧರ್ಮವನ್ನು ಅವರ ಉಪಾಧ್ಯಾಯರುಗಳು ಕಲಿಸಲಿ" (ಭಾಷಣ) ಉಳಿದದ್ದನ್ನು?

•   •   •

# ಸರ್ದಾರ್


ಸರ್ದಾರ್ ಪಟೇಲರು ಸಾರಿದರೆಂದರೆ
ಕಲಿಯುಗ ಕಲಿಗಳ ಪಡೆಯುವುದು
ಭಾರತ ಕಣ್ಣಲಿ ನಲಿಯುವುದು – ನಾಡಲಿ
ಸ್ವಪ್ನ ಸೂಳೆ ಮೇಳಾಗುವುದು.
ಆ ಶಿವಮಂತನು ನಡುಗುವನು
ಆ ಬಲವಂತದಲಿ
ಆ ಮತಿವಂತರಲಿ
ಗಾಂಧಿಯ ಶಾಂತಿ ತೋರುವುದು
ಮೈ ಪಡೆದೇಳುವುದು
ಹೊಳೆಯುವ ಕರಿಯ ಪನಾಟದಲಿ
ವೀಪೀವೇನನ ಕೂಟದಲಿ
ತಾಗುವ ತಂತ್ರದ ಸುಘಟ್ಟಣೆಯಲಿ
ಧ್ವಜ ಚಕ್ರಧ್ವನಿ ಘಟ್ಟಿಯಲಿ
ಸಂಘದ ಶಾಪದಲಿ
ಜಂಘವ ತಾಪದಲಿ
ನಸುಮೊರ್ಜಿರುವರ ಶಪದಲಿ
ಆರೆಗದ್ದುಗೆಯ ರಾಟೋಪದಲಿ
ಕೆನೆಯುವ ಗಾಯಕ್ವಾರದಲಿ
ನೆಲ ಬಿಸೆಯುವರು
ಗಡಿ ಒರೆಸುವರು
ಕೇಳಿರಿ ಭಾರತ ವೈದ್ಯನವ !
ರಜಪೂತರಿಗೆ
ಮಜ ! ಗೂರ್ಜರಿಗೆ
ಬೋಧಿಸುವನು ಸುಖದೈಕ್ಯವನು !
ಪೂರ್ತಿಯು ಮಾಡುತ್ತಿರುವನು ವಲ್ಲಭಾ
ನಾಡನು ಚಣಚಣಕೆ !
ಕೀರ್ತಿಯ ಗಳಿಸುತ್ತಿರುವರು, ನೋಡೊ,
ರಾಜರು ದಿನ ದಿನವು

# ರೈಲಿನವರ ಪಾಡು

ಆ ಸಣ್ಣ ಕುಗ್ರಾಮದ ರೈಲು ಸ್ಟೇಷನ್ ಮಾಸ್ತರೊಂದಿಗೆ ಅರ್ಧಗಂಟೆ ಸುಖ ದುಃಖ ವಿಚಾರಿಸಿದ್ದರಿಂದ ನನಗೆ ಈ ಮುಷ್ಕರದ ಗುಟ್ಟು ಚೆನ್ನಾಗಿ ಅರ್ಥವಾಯಿತು. ಅವರು ಹೇಳಿದರು: "ನೋಡಿ ಸ್ವಾಮಿ! ನನ್ನನ್ನ ಸ್ಕೂಲಿನವರು ಪಾಸು ಅಂತ ಹೇಳಿಬಿಟ್ಟರು. ಕೆಲಸ ಕೊಡೋವಾಗ ಟೆಂಪರರಿ ಅಂದರು. ಸಿಗ್ನಲಿಂಗ್ ಕಲಿತುಕೊ, ಲೆಕ್ಕ ಇಟ್ಟುಕೊಳ್ಳೋದು ಹೇಗೆ, ರೂಲ್ಸು ಅಂದರೆ ಏನು, ಗೂಡ್ಸು ಗಿಡ್ಸು ಇತ್ಯಾದಿ ಐವತ್ತೆಂಟು ಕಲೀರಿ ಅಂದ್ರು; ಕಲಿತಿದ್ದೇನೆಯೊ ಅಂತ ಪರೀಕ್ಷೆ ಬೇರೆ ಮಾಡಿದರು. ಅಪಮಾನ ಪಡಿಸಿದರು. ನನ್ನ ಮಾತು ನಂಬಿದರೆ ಸಾಲದೆ? ನಾನೇನು ಅಂಥ ಅಯೋಗ್ಯನೆ? ಸುಳ್ಳು ಹೇಳ್ತೀನೆಯೆ? ಇಷ್ಟೆಲ್ಲ ಮಾಡಿದ ಮೇಲೆ ನನ್ನನ್ನ ಈ ಕುಗ್ರಾಮದಲ್ಲಿ ಹಾಕಿದರು. ಹಾಲು, ಮೊಸರು, ಅಗ್ಗ ಅನ್ನಿ! ಅಕ್ಕಿಗೇನೂ ತಾಪತ್ರಯ ಇಲ್ಲ ಅನ್ನಿ! ಒಂದು ಸಿನಿಮ ಉಂಟೆ? ಸೊಗಸಾದ ಹೋಟಲುಂಟೆ? ಕುದುರೆ ಜೂಜಿನ ಸುದ್ದೀನೇ ಬರೋಲ್ಲ ಇಲ್ಲಿ, ನಮ್ಮ ಆಫೀಸರುಗಳೆಲ್ಲ ಕೈತುಂಬ ಹಣಾನ ಅದಕ್ಕೆ ಇದಕ್ಕೆ ಅಂತ ಷಹರಿನಲ್ಲಿ ಚೆಲ್ಲುತ್ತಾರೆ. ನಾನಿಲ್ಲಿ ಈ ಹಾಳು ಬೆಳಿಗ್ಗೆ ಒಂದು ರೈಲು, ಅದರ ಹಿಂದೊಂದು ಗೂಡ್ಸು; ಸಾಯಂಕಾಲ ಒಂದು ರೈಲು, ಅದರ ಹಿಂದೊಂದು ಗೂಡ್ಸು ಬಂದರೆ ಬಂತು, ಇಲ್ಲದಿದ್ದರೆ ಇಲ್ಲ, ಅದನ್ನ ಕಾಯ್ತಾ ನೊಣ ಹೊಡೀತಾ ಕೂತಿರಬೇಕು. ಗೋಳು ಕೆಲಸ; ತೋಳು ಉಳುಕಿದರೂ ಬಾವುಟ ಬೀಸಬೇಕು; ಕೇಳಿದವರಿಗೆಲ್ಲ ಟಿಕೀಟು ಕೊಡಬೇಕು! ಸ್ನೇಹಿತರನ್ನ ಸೇರಿಸಿ ಇಸ್ಪೀಟ್ ಆಡೋಣ ಅಂದ್ರೆ, ಕ್ವಾರ್ಟರ್ಸ್ ಅಂತ ಮನೆ ಬೇರೆ ಒಂದು ಕೊಟ್ಟುಬಿಟ್ಟಿದಾರೆ; ಸಂಸಾರ ಹೂಡದೆ ಇರುವುದಕ್ಕಿಲ್ಲ. ಅವಳೋ ಸದಾ ಉಸ್ತುವಾರಿ, ಆಳು ಕಾಳು ಬಿಟ್ಟು ಸಿಕ್ಕಿದಾರೆ ಅಂತ ಅವರ ಮೇಲೆ ಸದಾ ಇಲ್ಲದ ಸಲ್ಲದ ಜಗಳ—ಮಕ್ಕಳನ್ನ ಅಳಿಸಿದ, ಸೌದೆ ಸರಿಯಾಗಿ ಸೀಳಲಿಲ್ಲ, ಸೀಮೆಎಣ್ಣೆ ಕೆಳಕ್ಕೆ ಸುರಿದ ಅಂತ. ಹೋದರೆ ಹೋಯಿತು ಒಂದಿಷ್ಟು ಎಣ್ಣೆ, ಪಾಪಪ್ಪನ ಮನೇದು, ಕಾಸು ಕೊಟ್ಟಿಲ್ಲ ಏನಿಲ್ಲ ಅಂತ ನಾನಂದ್ರೆ ಸುಮ್ಮನಿರ್ತ್ತಾಳೆಯೇ, ಊಹೂಂ, ಇವರು ಕೊಡೋ ಸಂಬಳವೂ ೬೦ ರೂಪಾಯಿ. ನಮ್ಮ ಜವಾನನಿಗೆ ೫೫ ರೂಪಾಯಿ ತಿಂಗಳಿಗೆ ಸಂಬಳ. ೬೧ ರೂಪಾಯಿ ಅಲೋಯನ್ಸು ಕೊಡಿಸುತ್ತೀನೆ, ಕೆಲಸ ಮಾಡದೆ ಸುಮ್ಮನೆ ಕೂತಿದ್ದರೆ ಅಂತ ಜಯಪ್ರಕಾಶ್ ನಾರಾಯಣ್ ಹೇಳುತ್ತಿರುವಾಗ, ನನಗೆ ೬೦ ಸಾಕೆ? ನೀವೇ ಹೇಳಿ, ನೂರೋ ನೂರೈವತ್ತೋ ಕೊಡಲಿ ಸರ್ಕಾರದವರು, ಏನು ಬಂತು ಕೇಡು, ಅವರಿಗೆ—

ಕಾಗದ ಇಲ್ಲವೆ, ಅಚ್ಚುಕೂಟ ಇಲ್ಲವೆ? ನಮಗೋ ಒಂದು ದಿನ ರಜ ಅಂತ ತಕೊಳ್ಳುವ ಹಾಗಿಲ್ಲ; ಬೇರೊಬ್ಬ ಬಂದಮೇಲೇನೇ ಇಲ್ಲಿಂದ ಹೋಗಬೇಕಂತೆ. ನಾನು ಅಲ್ರಿ! ನಾವೇನು, ಮೊಳೆಟಿಯುವವರು ಕೆಟ್ಟುಹೋದೆವೆ? ಪ್ರಾಣ ತೆರುವುದಕ್ಕೆ? ಮೇಸ್ತರುಗಳು ಪಾಪ ೨೦ ರೂಪಾಯಿಯಲ್ಲಿ ಬದುಕಬಲ್ಲರು, ವಾರಕ್ಕೆ ೩೩ ಗಂಟೆ ಅಖಂಡವಾಗಿ ಕಿರಿಚಬಲ್ಲರು, ಓದಿ ಪಾಸು ಮಾಡಬಲ್ಲರು, ಅವರಿಗೆ ದೇವರು ಬುದ್ಧೀನೂ ವಿನಯಾನು ಕ್ಷಮೇನೂ ದೇಶಾಭಿಮಾನಾನೂ ಕೊಟ್ಟಿದಾನೆ. ನಮಗೇನಿದ್ದರದು? ಅವರು ಕೆಲಸ ನಿಲ್ಲಿಸಿದ್ರೆ ಪ್ರಪಂಚ ತಲೆಕೆಳಗಾಗುತ್ತದೆಯೆ? ನಾವೆಲ್ಲ ಸೇರಿ ನಾಲ್ಕುದಿನ ಕೆಲಸ ನಿಲ್ಲಿಸಿದ್ರೆ, ನಿಮ್ಮನ್ನೆಲ್ಲ ಉಪವಾಸ ಸಾಯಿಸುವ ಶಕ್ತಿ ಇದೆ ನಮ್ಮಲ್ಲಿ. ನೆನಪಿರಲಿ ಆದರೀಗ ನಾವು ಕೇಳಿದಷ್ಟು ಕೊಡಬೇಕು" ಅಂದರು. ಹದಿಮೂರಾಣೆ ಟಿಕೇಟಿಗೆ ಚಿಲ್ಲರೆ ಇಲ್ಲದೆ, ಒಂದು ರೂಪಾಯಿ ಕೊಟ್ಟು ನಾನೂ ಅವರ ರೂಮಿನಿಂದ ಹೊರಕ್ಕೆ ಬಂದೆ. ನನ್ನ ಮಗ ಈ ವರ್ಷ ಎಸ್ಸೆಸ್ಸೆಲ್ಸಿ ಪಾಸಾಗದಿದ್ದರೆ, ಹೇಗಾದರೂ ಮಾಡಿ ಅವನನ್ನ ರೈಲು ಕೆಲಸಕ್ಕೇ ಸೇರಿಸಿಬಿಡಬೇಕು. ಅವನು ನನಗಿಂತ ಸುಖವಾಗಿ ಬಾಳುವುದಕ್ಕೆ ಅದೇ ಸರಿಯಾದ ದಾರಿ ಅಂತ ಅಂದುಕೊಂಡು ರೈಲು ಹತ್ತಿದೆ.

— ರೇವಣ್ಣ.




ವೈದ್ಯನ ಮನೆಯಲ್ಲಿ ಬಾಪೂಜೀ ಪೂಜೆ.

# ಆಗ-ಈಗ

೧

ಮೊದಲು ಮಹಿಷಿ ಹಾಲ ಕರೆದು
ಗಿರಿಯ ತೋಟ ಕಾಫಿ ಬೀಜ
ಹುರಿದು ಬೆರೆಸಿ ಬಿಸಿಯ ಮಾಡಿ
ಕುಡಿದ ದಾವುದು ?
ಬರಿಯ ಚಿಕರಿ ಹುಣಿಸಿ ಕೊಳೆಯ
ಕುಡಿವುದಾವುದು ?

೨

ಸವಿದು ನಮ್ಮ ನುಡಿಯ ಜೇನ
ಕಿವಿಯುಲೆರೆದು ಕರುಳ ತಣಿಸಿ
ನಮ್ಮ ವೀಣೆ ನಮ್ಮ ವಾಣಿ
ಹಾಡಿ ದಣಿವೆವು
ಸಿನಿಮ ಬೆಡಗ ಬಡಗ ನವಿಲು
ಹಾಡ ಒಗೆವೆವು !

೩

ಹಲಸು ಮಾವು ನಮ್ಮ ಹಣ್ಣು,
ನಂಜನಗೂಡಿ ಕದಳಿ ಹಣ್ಣು,
ಬಳಿಕ ಸೊಗದ ಕೊಡಗಿನಿಂದ
ಹಣ್ಣು ಬಂದಿತು.
ಕೃತಕ ರಸದ ಡಬ್ಬಿ ಡಬ್ಬಿ
ಹಣ್ಣು ಎನಿಸಿತೆ ?

# ಚಿನ್ನದಂತ ಹೆಡ್ಮಾಸ್ತರು

ಹೆಡ್ಮಾಸ್ತರು ಅಂದ್ರೆ ರಾಮಣ್ಣನವರು. ನಭೂತೋ ನಭವಿಷ್ಯತಿ, ಹುಡುಗರ ಹತ್ರ ಬಲು ಸಲಿಗೆ, ಅಂಥವರನ್ನ ಮೊನ್ನೆ ಡಿ.ಇ.ಒ. ಯದ್ವಾತದ್ವಾ ಬೈದರೂ ಅಂದ್ರೆ ಯಾರಿಗೆತಾನೆ ಸಹಿಸುತ್ತದೆ?

ಹೈಸ್ಕೂಲ್ ಇನ್ಸ್ಪೆಕ್ಷನಿಗೆ ಅಂತ ಡಿ.ಇ.ಒ. ಆಫೀಸ್ ರೂಮಿಗೆ ನುಗ್ಗಿದಾಗಲೇ, ಸಹಸ್ರನಾಮಕ್ಕೆ ಶುರು, ಇನ್ನೇನೂ ಇಲ್ಲ. ಗೇಟು ದಾಟಿ ವರಾಂಡಾ ಮೂಲಕ ಬಂದಾಗ, ಸೆಕೆಂಡ್ ಇಯರ್ ಬಿ ಹುಡುಗರು ಇಸ್ಪೀಟ್ ಆಡ್ತಾ ಇದ್ದದ್ದು ಡಿ.ಇ.ಒ. ಕಣ್ಣಿಗೆ ಬಿತ್ತಂತೆ. ರಾಮಣ್ಣನವರಿಗೆ ಇಸ್ಪೀಟೆಂದರೆ, ಇಹಲೋಕ ಸ್ವರ್ಗ, ಆದರೂ, ಅವರಿಗೆ ರೇಗಿತು. "ಇರಲಾರದು, ಸಾರ್! ತಾವು ಬಿಸಿಲಲ್ಲಿ ಬಂದಿದ್ದೀರಿ, ಕಣ್ಣು ಸರಿಯಾಗಿ ಕಾಣಿಸಿಲ್ಲವೆಂದು ತೋರುತ್ತದೆ, ನನ್ನ ಹುಡುಗರು ತುಂಬ ಸಭ್ಯರು," ಅಂದೆಲ್ಲ ಕೂಗಿದರು. ಡಿ.ಇ.ಒ.ಗೂ ರೇಗಿತು. "ಬನ್ರಿ, ಕ್ಲಾಸಿಗೆ" ಅಂದರು, ಇಬ್ಬರೂ ಕ್ಲಾಸಿಗೆ ನುಗ್ಗಿದರು.

"ಯಾರೋ ಅದು ಇಸ್ಪೀಟು ಆಡ್ತಿದ್ದದ್ದು?" ಎಂದು ರಾಮಣ್ಣನವರೇ ಕೇಳಿದರು. ಒಬ್ಬ ಹುಡುಗನೂ ಕುಟಿಪಿಟಿಕ್ಕೆನ್ನಲಿಲ್ಲ. ಏನೇ ಬರಲಿ, ಒಗ್ಗಟ್ಟಿರಲಿ ಎಂದು ಹಿಂದೆ ಅವರು ಕಲಿಸಿದ್ದು ಬರೀ ಶಬ್ದಾಲಂಕಾರವಾಗಿರಲಿಲ್ಲ. ಡಿ.ಇ.ಒ. ಸಾಹೇಬರೂ ಕೂಡ. "ಈಗತಾನೆ ನಾನು ಈ ಮಾರ್ಗವಾಗಿ ಹೆಡ್ಮಾಸ್ತರ ರೂಮಿಗೆ ಹೋಗುತ್ತಿದ್ದಾಗ, ಈ ಕೋಣೆಯಲ್ಲಿ ನೀವು ಇಸ್ಪೀಟ್ ಆಡುತ್ತಿದ್ದಿರಿ, ನಾನ್
ನೋಡಿದೆ" ಎಂದರು. "ಇದು ನಿಜವೇ? ನೀವು ಆಡುತ್ತಿದ್ದಿರಾ, ಆಯೊ
ರಾ? ಎಂದು ರಾಮಣ್ಣನವರು ಮತ್ತೆ ಪ್ರಶ್ನಿಸಿದರು; ಗರ್ಜಿಸಿದರು. ಎ
ಎಬ್ಬಿಸಿ ನಿಲ್ಲಿಸಿ, ಕಿಸೆಗಳನ್ನು ಶೋಧನೆ ಮಾಡಬೇಕೆಂದು ಡಿ.ಇ.ಒ. ಆಜ್ಞೆ
"ಕೆಟ್ಟ ಅಭ್ಯಾಸಗಳನ್ನ ಶಾಲೆಯಲ್ಲೇ ಕಲಿಯುತ್ತಿದೀರಾ? ಹೆ
ಇಲ್ಲವೆ? ಹೇಳಿಕೊಡೋರು ಇಲ್ಲವೆ? ಸುಳ್ಳು ಬೇರೆ ನಿಮ್ಮ ತ
ಎಂದು ಅವರು ಕೂಗಾಡಿದರು.

ಹುಡುಗರನ್ನೆಲ್ಲ ಸಾಲಾಗಿ ಗೋಡೆ ಅಂಚ
ಡಿ.ಇ.ಒ. ಅವರೂ ಬೆಂಚು ಡೆಸ್ಕುಗಳನ್ನೆಲ್ಲ
ಇಸ್ಪೀಟಿನ ಚೂರು ಕೂಡ ಸಿಗಲಿಲ್ಲ.
ಕಿಸೆಗಳನ್ನು ಇಬ್ಬರೂ ಶೋಧಿಸಿ

"ಆಶ್ಚರ್ಯ !" ಎಂದರು ಡಿ.ಇ.ಓ "ನನಗೆ ಗೊತ್ತು ಸಾರ್ ! ನಮ್ಮ ನಮ್ಮ ಹುಡುಗರು ಮಾಡಲ್ ವಿದ್ಯಾರ್ಥಿಗಳು, ಸಾರ್ ! ಬೇರೆ ಯಾವುದೋ ಹೈಸ್ಕೂಲಲ್ಲಿ ಆದದ್ದನ್ನ ತಾವು ಮೈ ಮರೆತು ನನ್ನ ಮಾದರಿ ಶಾಲೆಗೆ ಅನ್ವಯಿಸುತ್ತಾ ಇದೀರಿ, ಸಾರ್ !" ಎಂದರು, ರಾಮಣ್ಣನವರು. "ಕಣ್ಣಾರೆ ಕಂಡಹಾಗಿತ್ತಲ್ಲ? ಇದೇ ರೂಮು ! ಬಾಗಿಲಲ್ಲಿ ಹೀಗೆಯೇ ಎರಡನೆಯ ವರ್ಷ ಬಿ ಅಂತ ಬರೆದಿತ್ತು ...ಸರಿ ! ಇವತ್ತು ಯಾಕೊ ನನ್ನ ಬುದ್ಧಿ ನೆಟ್ಟಗಿಲ್ಲ. ಮುಂದಿನ ತಿಂಗಳು ಬರುತ್ತೇನೆ ...ಏಳು ದಿವಸ ರಜ ತೆಗೆದುಕೊಬೇಕು ...." ಎನ್ನುತ್ತ, ಡಿ.ಇ.ಓ ತಲೆಯ ಮೇಲೆ ಕೈ ಇಟ್ಟುಕೊಂಡು ಕಾರಿನಕಡೆ ನಡೆದರು.

ಅವರು ಅತ್ತಲಾಗೆ ತೊಲಗುತ್ತಲೂ, ರಾಮಣ್ಣನವರು ಅದೇ ಕ್ಲಾಸಿಗೆ ನುಗ್ಗಿ, "ಲೋ ! ನಿಜ ಹೇಳ್ರೋ" ಅಂದರು "ಆಡುತ್ತಿದ್ದೆವು ಸಾರ್" ಎಂದರು. ಎಂಟು ಜನ ಮತ್ತೆ ಇಸ್ಪೀಟು ಕಟ್ಟನ್ನೆಲ್ಲಿ ಮುಚ್ಚಿಟ್ಟಿದಿರೋ ಜಾಣ ಮರಿಗಳಿರಾ"! ಎಂದು ರಾಮಣ್ಣನವರು ಅವರ ಮುಖಂಡರ ಬೆನ್ನು ತಟ್ಟಿದರು. "ಡಿ.ಇ.ಓ ಜೋಬಿಗೇ ಸೇರಿಸಿಬಿಟ್ಟೆವು ಸಾರ್ !" ಎಂದವರು "ಅಯ್ಯೋ !.... ದೇವಾ ! ಹೋಯಿತಲ್ಲೋ ಸೊಗಸಾದ ಒಂದು ಕಟ್ಟು ! ಮೊನ್ನೆ ತಾನೆ ಕೊಟ್ಟಿದ್ದನಲ್ಲೋ ನಿಮಗೆ ಅದನ್ನ !" ಎಂದರು, ರಾಮಣ್ಣನವರು "ಹಾಗೆ ಹೊಡೆದುಕೊಂಡು ಹೋಗುವುದಕ್ಕೆ ಬಿಟ್ಟೇವಾ, ನಾವು! ತಮ್ಮ ಆಶೀರ್ವಾದ ಸಾರ್ ! ನಾವು ಸಾಲಾಗಿ ನಿಂತಿದ್ದೆವಲ್ಲಾ, ಅವರು ಉದ್ದಕ್ಕೂ ಹುಡುಕುತ್ತಾ ಬಂದರಲ್ಲಾ ಆಗ. ನಮ್ಮ ರಾಜು ಪುನಃ ಸಂಪಾದಿಸಿಬಿಟ್ಟ...." ಭಲಾ ಅಂದರು. ರಾಮಣ್ಣನವರು ಸಂಜೆತನಕ ಅಲ್ಲೇ ಆಡುತ್ತ ಆನಂದದಲ್ಲಿದ್ದರು. ಹೆಡ್ಮಾಸ್ತರು ಅಂದ್ರೆ ರಾಮಣ್ಣನವರು.

—ಗಂಗಾಧರ.

* * *

ಸರ್ದಾರ್ ಪಟೇಲರು ಅಖಿಲ ಕರ್ಣಾಟಕ ರಾಜಪ್ರಮುಖರನ್ನು ಭೇಟಿ ಮಾಡುತ್ತಾರೆ ಎಂದು ಆಶೆಗೊಂಡಿದ್ದ ಜನಸ್ತೋಮಕ್ಕೆ ನಿರಾಶೆಯಾಯಿತಂತೆ —ಸದ್ಯಕ್ಕೆ.

* * *

ಜರ್ಮನಿಯಲ್ಲಿ ಪುನರುದ್ಧಾರಕ್ಕಾಗಿ ಅಲ್ಲೊಬ್ಬ "ಮಹಾತ್ಮಾ ಗಾಂಧಿ" ಉದಯಿಸಬೇಕು ಎಂದು ಜೇಮ್ಸ್ ಕ್ಯಾಮರಾನ್ ಹೇಳಿದರಂತೆ—

ಅಲ್ಲಿನ ಸ್ಥಿತಿಗತಿ ಆಜೂ ಬಾಜೂ, ನೋಡಿದರೆ ದೇವರಿಗೂ ಅದು ಅಸಾಧ್ಯ ಅನ್ನಿಸುತ್ತದೆ.

* * *

# ಒಂದೇ ಸಂದೇಶ

— o —

## ಸಂಶೋಧನಾ ಕ್ಷೇತ್ರಕ್ಕೆ

ನಿಮ್ಮ ಈ ಸಂಸ್ಥೆ ದೇಶದ ಅಭ್ಯುದಯದ ತಳಹದಿ. ಇಂಥವು ನಮಗೆ ಇನ್ನೂ ನೂರಾರು ಬೇಕು. ಹಳ್ಳಿಹಳ್ಳಿಯಲ್ಲೂ ಒಂದೊಂದು ಬೇಕು. ಆದರೆ, ನಿಮ್ಮ ಕೆಲಸ ಕಾರ್ಯಗಳನ್ನು ನೀವು ಸತ್ಯ, ಅಹಿಂಸೆ, ಎಂಬ ಗಾಂಧೀ ತತ್ವಗಳ ಮೇಲೆ ನಡೆಯಿಸಿ. ಆಗ ನಮಗೆ ಜಯ ಸಿದ್ಧ.

---

## ಅನಾಥಾಲಯಕ್ಕೆ

ನಿಮ್ಮ ಈ ಸಂಸ್ಥೆ ದೇಶದ ಅಭ್ಯುದಯದ ತಳಹದಿ. ಇಂಥವು ನಮಗೆ ಇನ್ನೂ ನೂರಾರು ಬೇಕು. ಹಳ್ಳಿ ಹಳ್ಳಿಯಲ್ಲೂ ಒಂದೊಂದು ಬೇಕು. ಆದರೆ ನಿಮ್ಮ ಕೆಲಸ ಕಾರ್ಯಗಳನ್ನು ನೀವು ಸತ್ಯ ಅಹಿಂಸೆ ಎಂಬ ಗಾಂಧೀ ತತ್ವಗಳ ಮೇಲೆ ನಡೆಯಿಸಿ. ಆಗ ನಮಗೆ ಜಯ ಸಿದ್ಧ.

---

## ಮುನಿಸಿಪಲ್ ಹೈಸ್ಕೂಲ್ ಪಾಠಶಾಲಾ ಸಮ್ಮೇಳನಕ್ಕೆ

ನಿಮ್ಮ ಈ ಸಂಸ್ಥೆ ದೇಶದ ಅಭ್ಯುದಯದ ತಳಹದಿ. ಇಂಥದ್ದು ನಮಗೆ ಇನ್ನೂ ನೂರಾರು ಬೇಕು ........................

---

## ಗಾಂಧೀ ಸ್ಮಾರಕನಿಧಿ ಸಭೆಗೆ

ನಿಮ್ಮ ಈ ಸಂಸ್ಥೆ ದೇಶದ ಅಭ್ಯುದಯದ ತಳಹದಿ ಇಂಥವು ನಮಗೆ ಇನ್ನೂ ನೂರಾರು ಬೇಕು ............

---

## ಮಠಗಳ ಹತ್ತೋಟಿ ಖಂಡನಾ ಸಭೆಗೆ

ನಿಮ್ಮ ಈ ಸಂಸ್ಥೆ ದೇಶದ ಅಭ್ಯುದಯದ ತಳಹದಿ. ಇಂಥವು ನಮಗೆ ಇನ್ನೂ ನೂರಾರು ಬೇಕು. ಹಳ್ಳಿ ಹಳ್ಳಿಯಲ್ಲೂ ಒಂದೊಂದು ಬೇಕು. ಆದರೆ, ನಿಮ್ಮ ಕೆಲಸ ಕಾರ್ಯಗಳನ್ನು ಸತ್ಯ ಅಹಿಂಸೆ ಎಂಬ ಗಾಂಧೀ ತತ್ವಗಳ ಮೇಲೆ ನಡೆಯಿಸಿ. ಆಗ ನಮಗೆ ಜಯ ಸಿದ್ಧ.

---

**ಸರ್ಕಸ್ ಮಾಲೀಕರ ಸಭೆಗೆ**

ನಿಮ್ಮ ಈ ಸಂಸ್ಥೆ ದೇಶದ ಅಭ್ಯುದಯದ ತಳಹದಿ. ಇಂಥದ್ದು ನಮಗೆ ಇನ್ನೂ ನೂರಾರು ಬೇಕು. ಹಳ್ಳಿ ಹಳ್ಳಿಯಲ್ಲೂ ಒಂದೊಂದು ಬೇಕು ಆದರೆ . . .... .

---

**ಲಾಯರ್ ಅಸೋಸಿಯೇಷನ್**


ನಿಮ್ಮ ಈ ಸಂಸ್ಥೆ ನಿಮ್ಮ...................ಆಗ, ನಮಗೆ ಜಯ ಸಿದ್ಧ.

---

**ಕಿಸಾನ್ ಮಜ್ದೂರ್ ಸಂಸ್ಥೆ**

ನಿಮ್ಮ ........................................... ನಮಗೆ ಜಯ ಸಿದ್ಧ.

ಇತ್ಯಾದಿ



# ಅಂಧಪ್ರೇಮ

"....ಹುಡುಗ ಒಪ್ಪಿದ್ದಾಗಿತ್ತಲ್ಲ! ....ಹುಡಿಗಿಯೂ ಒಪ್ಪಿದ್ದಳು. ಆದರೂ ಮದುವೆ ನಿಂತುಹೋಯ್ತೂಂದ್ರೆ ಆಶ್ಚರ್ಯ ಅಂಬುಜಮ್ಮನೋರೆ....ಆಶ್ಚರ್ಯ....'

...."ಇಷ್ಟಕ್ಕೆಲ್ಲಾ ಕಾರಣ ಅವಳ ಸ್ನೇಹಿತಳೆ....ಅವಳ ಗೆಳತಿನೇ ಕಣ್ರೀ ಮೀನಾಕ್ಷಮ್ಮ...."

"ಅವಳ ಸ್ನೇಹಿತಳು?....ಅಂದರೆ ಅವರಿಬ್ಬರ ಅಮರ ಪ್ರೇಮದ ನಡುವೆ ಖಳನಂತೆ ಪ್ರವೇಶಿಸಿದಳೆ ಆಕೆ?...."

"....ಇಲ್ಲ...."

"ಅಥವಾ ಆ ಭಾರೀ ಜಮೀನ್ದಾರರ ಮಗನನ್ನು ತನ್ನ ಮಿತ್ರಳೇ ಕೈ ಹಿಡಿಯುವುದನ್ನು ನೋಡಿ ಸಹಿಸಲಾರದೆ ಹೊಟ್ಟೆಕಿಚ್ಚಿನಿಂದ ಈ ಕುಯುಕ್ತಿ ತೆಗೆದಿರಬೇಕು ಆ ಘಾತುಕಿ".

"ಹಾಗೂ ಆಗಲಿಲ್ಲ....ಹಾಗಾಗಿದ್ದ ಪಕ್ಷದಲ್ಲಿ ಮತ್ತೆ ಅವರಿಬ್ಬರೂ ಗಳಸ್ಯ ಕಂಠಸ್ಯ ಆಗಿರುತ್ತಿದ್ದರೇ?...."

"ಇಲ್ಲದ ಪಕ್ಷಕ್ಕೆ ವರದಕ್ಷಿಣೆ ಬಾಬತ್ತಿನಲ್ಲಿ-ಹೆಚ್ಚುಕಡಿಮೆ ಆಗಿರಬೇಕು...."

"ಭಾರೀ ಜಮೀನ್ದಾರರು ವರದಕ್ಷಿಣೆಗೆ ಕೈಯೊಡ್ಡುತ್ತಾರೆಯೇ? ಸಧ್ಯ ಹುಡುಗಿ ಮನೆಗೆ ಬಂದರೆ ಸಾಕೆಂದು ಇದ್ದರು..."

"ಮತ್ತೇಕೆ ಈ ಪ್ರೇಮ ವಿವಾಹ ನಿಂತುಹೋಯಿತು? ಪತ್ರವ್ಯವಹಾರ ಕೂಡ ನಡೆಸಿದ್ದರಂತೆ"

"ಅಂತೆ ಏನು ಪೇಪರಿನಲ್ಲಿ ಬಂದ 'ಬೇಕಾಗಿದ್ದಾರೆ ಲೇಖನಿ ಮಿತ್ರರು' (Pen Friendship) ಜಾಹಿರಾತಿನಿಂದ ಇಬ್ಬರಿಗೂ ಪತ್ರವ್ಯವಹಾರ ನಡೆಯ ತೊಡಗಿ ಅವಳು ಅವನ ಶೈಲಿಗೆ ಅವನ ಪದಜೋಡಣೆಗೆ, ಅವನ ರಸಿಕ ವರ್ಣನೆಗೆ ಮಾರುಹೋದಳು. ಮೇಲಾಗಿ ಆಸ್ತಿವಂತರು. ಆಸ್ತಿ ಇಲ್ಲದ ಗಂಡನ ಕೈ ಹಿಡಿದರೆ ಅವನನ್ನು ಮುಂದೆ ತಾನೇ ತನಗೆ ಬೇಕಾದ ಹಾಗೆ ನಡೆಸಬಹುದೆಂದು ಬಗೆದಳು

ಆ ಹುಡುಗಿ. ಮತ್ತೆ ಅವನ ವಸಂತಋತು ವರ್ಣನೆ ಆ ಕೋಕಿಲೆ—ಆ ಸುಗಂಧ ಇವಳನ್ನು ಅವನಲ್ಲಿ ಅನುರಾಗಗೊಂಡು ಮರುತ್ತರದಲ್ಲಿ ತನ್ನ ಒಪ್ಪಿಗೆಯ ಸೂಚನೆ ಕೊಟ್ಟುಬಿಟ್ಟಳು...."

" ಪ್ರೇಮ ಪತ್ರಮುಖೇ ಪ್ರಾರಂಭಿಸಿತೂನ್ನಿ"

ಹೂ ಕೇಳಿ, ಕಾಲೇಜು ಕಲಿತ ಈ ಹುಡುಗಿ ರಸಿಕ ರಂಗಧಾಮನ ಕೂಡಿ ಕಾರಿನಲ್ಲಿ ಜಾರ್ಜೆಟ್ ಉಟ್ಟು ಊಟಿಗೆ ಹೊರಡುವ ಕನಸು ಕಂಡಿದ್ದಳು .. ಮದುವೆ ಮುಹೂರ್ತ ಕೂಡ ನಿಷ್ಕರ್ಷೆಯಾಗಿತ್ತು....ಆ ಅಂಥಪ್ರೇಮಿಗಳ ವಿವಾಹಕ್ಕಾಗಿ.... ಆದರೆ ಅವಳ ಗೆಳತಿ ಅಡ್ಡಬಂದಳು...."

" ಪಾಪಿ ...ಇಬ್ಬರು ಪ್ರೇಮಿಗಳ ವಿವಾಹ ಮುರಿದಳು...."

" ....ಹಾ ತಡಿಯಿರಿ....ಪೂರ್ತಿ ಕೇಳಿ ಆ ಕನ್ಯೆಯ ಗೆಳತಿ ತನ್ನ ಚಲುವ ಗೆಳತಿಯ ಗಂಡನನ್ನು ಮದುವೆಗೆ ಮುಂಚೆ ನೋಡಬೇಕೆಂದು ಕೊರವಂಜಿಯ ವೇಷ ಹಾಕಿ ಭಾವಿ ವರನ ಮನೆ ಹೊಕ್ಕಳು...."

" ಅದೇಕೆ ನಿಜರೂಪದಲ್ಲಿ ಹೋಗಲಿಲ್ಲ ?...."

"....ಗುಟ್ಟು ಇದ್ದಲ್ಲಿ ರಟ್ಟಾಗುವುದ. ಹೇಗೆ ಮತ್ತೆ ? .. ನಿಜವಾದ ಮೂಗೋ ಕೃತಕ ನ ಶಿಕವೊ ಸೀನಿದಾಗ ತಾನೆ ಗೊತ್ತಾಗಬೇಕು ?... ದಂತಪಂಕ್ತಿ ಕೃತಕ ವಲ್ಲದಿದ್ದರೆ ಚಕ್ಕಲಿ ಕಡಿಯ-ಲಿಕ್ಕೆ ಹಿಂದುವ ಎಂದೇಕೆ ನೋಡಬೇಕು ?...."

" ಅಲ್ಲವೆ ಮತ್ತೆ ...ಆ ಮೇಲೆ ? "

"....ಇವೇ ಅಲ್ಲದೆ ಪ್ರತ್ಯಕ್ಷ ಆಸಾಮಿನ್ನ ನೋಡದೆ ಬರವಣಿಗೆಯ ರಸ ವತ್ತಿಗೆ ವರ್ಣನೆಯ ಗಂಗಿಗೆ ಸುಂದರಿಯೊಬ್ಬಳು ಮಾಲೆ ಹಾಕುವುದರಲ್ಲಿ ಅರ್ಥ ವಿದೆಯೆ ? ಎಂದು ತನ್ನ ಗೆಳತಿಯ ಅತ್ತೆಮನೆಯ ನಿಜರೂಪ ಪ್ರತ್ಯಕ್ಷ ಕಾಣಲು ಕೊರವಂಜಿಯಾಗಿ ಹೊರಟಳು ..."

" ಅದರಿಂದ ಏನು ಪ್ರಯೋಜನವಾಯಿತು ? ರಟ್ಟಾಗಲು ಗುಟ್ಟೇನಾದರೂ ಇತ್ತೆ ?...."

" ಇರದೇ ಏನು-ಅನಾಹುತವೇ ತಪ್ಪಿ ಆಸ್ತಿ ಇಲ್ಲದಿದ್ದರೂ ದೃಢಕಾಯನಾ ಗಿ...ವ- ಏರ್ ಕ್ರಾಫ್ಟ್ ಆದರೂ ಸ ಜೆ ಹೆಂಡ್ತೀನ್ನ ಸಿನಿಮಾಕ್ಕೊ ವಾಕಿಂಗೊ ಕರೆದೊಯ್ಯುವವನನ್ನು ಮದುವೆಯಾದದ್ದು . "

" ಅಂಬುಜಮ್ಮನೋರೆ ಅಂಥಾ ಏನು ದೋಷ ಕಂಡಳು ನಿಮ್ಮ ಕೃತಕ ಕೊರವಂಜಿ ಆ ಅಂಥ ಪ್ರೇಮಿಯಲ್ಲಿ"

" ನಿಜ ಹೇಳಿದರೂ ಕೇಳ್ತಿರಾ–ಸುಳ್ಳು ಹೇಳಿದರೂ ಹೂಗುಟ್ತಿರಾ–ಮೀನಾಕ್ಷಮ್ಮನೋರೆ–ಕೈ ನೋಡುವೆನೆಂದು ರತ್ನದಂಥ ಮಡದಿ ದೊರೆಯುವಳೆಂದೂ ಆ ಜಮೀನ್ದಾರರ ಏಕಪುತ್ರನ ಮೂಗಿಗೆ ತುಪ್ಪ ಸವರಿ ...ಆ ವರನನ್ನು ಕರೆಸಿದಳು. ಕೈ ನೋಡುವ ನೆಪದಲ್ಲಿ ಆ ಭಾವಿ ಅಳಿಯ ದೇವರನ್ನೂ ಆಳವಾಗಿ ಪರೀಕ್ಷಿಸಿದಳು ನಮ್ಮ ಕೊರವಿ ಅಳಿಯ ದೇವರು ನಿಜವಾಗಿ ಅಂಧ ಪ್ರೇಮಿಗಳು–ಮಸಿ ಗಾಜಿನ ಕನ್ನಡಕದ ಹಿಂದೆ ಅಡಗಿದ ನೇತ್ರಗಳಲ್ಲಿ ಒಂದು ಗಾಜಿನದೂ ಒಂದು ಬೆಕ್ಕಿನದೂ ಎಂದು ಪತ್ತೆಹಚ್ಚಿದಳು. ತನ್ನ ಗೆಳತಿಯು ಭಾವಿ ಪ್ರೇಮಿ ಅಂಧಪ್ರೇಮಿ ನಿಜವೆಂಧೂ ಆದ್ದರಿಂದಲೇ ತಕ್ಕ ವರನಲ್ಲವೆಂದೂ ಗುಣಿಸಿದಳು ಈ ಕಣ್ಣಿನ ಕಾರ್ಪಣ್ಯವಲ್ಲದೆ ಕೇವಲ ಇಪ್ಪತ್ತು ಇಂಚಿನ ಎದೆಗಾರಿಕೆಯುವನು ಇನ್ನು ಎಷ್ಟು ಬಿಗಿಯಾಗಿ ತಾಳಿ ಬಿಗಿದಾನು ? ಇದನ್ನು ಕಂಡೂ ಹೇಗೆ ಗೆಳತಿಗೆ 'ಸುಮಂಗಲೀಭವ' ಎಂದೆನ್ನುವುದು ? ಕಣ್ಣೇ ಇಲ್ಲದ ಈ ಕಪೋತಿಗೆ ಕನ್ಯೆ ಬೇರೆ ದಂಡ ಎಂದು ಗೆಳತಿಗೆ ತಿಳಿಸಿದಳು. ಬರೀ ಪತ್ರಕ್ಕೆ ಮರುಳಾಗಿ ಪ್ರೇತ ಗಂಟುಹಾಕ್ಕೊ ಬೇಡಾ ಎಂದು ಆ ಗೆಳತಿಯು ಅಣ್ಣ ಏರ್‌ಕ್ರಾಪ್ಟ್‌ನಲ್ಲಿದ್ದ–ಒಳ್ಳೆ ಆಳು ತಂದು ಗಂಟು ಹಾಕಿ ಬಿಟ್ಟಳು."

"... ಹಾಗೇ ಸರಿ–ಆ ಅಂಧಪ್ರೇಮಿ ?...."

" ಬೆಳಕು ಹರಿಯುವುದರಲ್ಲೇ–ಅಳಿಯನ ಕುರುಡು ಹೊರಬಿತ್ತು....ಮತ್ಯಾವ ಮೋಹನಾಂಗಿಗೆ ಪ್ರೇಮ ಪತ್ರ ಬರೆಯುತ್ತಿದೆಯೋ ಆ ಕಪೋತಿ ?—ಬಲ್ಲವರಾರು ? ....ಹ್ಹಹ್ಹಹ್ಹ...."

" ಹ್ಹಹ್ಹ ಚೆನ್ನಾಗಿದೆ ಆ ಅಂಧಪ್ರೇಮಿಯು ಪ್ಲಾನು....ಬರ್ತೀನಮ್ಮಾ ಹೊತ್ತಾಯ್ತು" " ಬರ್ತೀರಾ ಒಳ್ಳೇದು–ಕುಂಕಮ ಕೊಳ್ಳಿ...."

— ದಾಶರಥಿ ದೀಕ್ಷಿತ್.

ಜಬರ್ಗ್ ಗಲಭೆಗಳ ವಿಚಾರಣೆಗೆ ಶ್ರೀ ಚರ್ಚಿಲ್ಲರನ್ನು ನೇಮಿಸುತ್ತಾರೆಂಬುದು ಶುದ್ಧ ಸುಳ್ಳಂತೆ

• • •

ಪ್ಯಾಲಸ್ಟೈನಿನವರು ಶೇಕಡಾ ಸಾಲ್ಕರ ಮುಖಂಡರನ್ನು ತಮ್ಮ ಸಲಹೆಗಾರರಾಗಿ ನೇಮಿಸಿರುವುದು ಸುಳ್ಳಂತೆ.

# ಚಿನ್ನ ಕಲಾಯಿ

ಆ ಕಾಲದಲ್ಲಿ ನೋಡಿ ರಸ್ತೇಲೆಲ್ಲಾ ಕೂಗಿಕೊಂಡು ಬರ್ತಾಇದ್ದರು ರಾಗ ರಾಗವಾಗಿ.


ಚಿನ್ನ ಬೆಳ್ಳಿ ಕೆಲ್ಸ ಐತಾ ಮಾಡ್ಸೋದು ” ಅಂತ.

ಮನೆ ಮನೇಲೂ ಚಿನ್ನ ಬೆಳ್ಳಿ ಹೇರಳವಾಗಿ ಬಿದ್ದಿರುತ್ತಿತ್ತು.· ಏನಾದರೂ ಚಿಕ್ಕ ಪುಟ್ಟ ಕೆಲಸ ಸಿಕ್ಕೇ ಸಿಗೋದು.

ಆದರೆ ಈಗಿನ ಕಾಲ ನೋಡಿ. ಬೆಳಗಿನಿಂದ ಸಾಯಂಕಾಲದ ತನಕ ಕಾದು ನೋಡಿದ್ದೇನೆ ಆ ಕೂಗೇ ಇಲ್ಲ ಒಂದೇ ಕೂಗೇ ಕೇಳಿಸೋದು

“ ಕಲಾಯ್, ಕಲಾಾಾಯ್ ”

ಚಿನ್ನ ಬೆಳ್ಳಿ ಕೆಲಸ ಹೋಗಿ ಪಾತ್ರೇಗೆ ಕಲಾಯ್‌ಗೆ ಬಂತೆ. ಅಲ್ಲಾ ಒಬ್ಬರಿಗೊಬ್ಬರು ಕಲಾಯ್ ಮಾಡೇ ಜೀವನ ನಡೆಸೋ ಕಾಲ ಬಂತೆ?



ಈಗ ಧೈರ್ಯವಾಗಿ ಮುಸ್ತ್ಯಾರ್ಸಾಬಿ ರಸ್ತೇಲಿ
ಮೆರವಣಿಗೆ ಹೋಗಬಹುದಮ್ಮಾ.

# "ಒಳ್ಳೇ ನದಿಗಳು"

ನನ್ನ ಹಣೇಬರಹ ಏನು ಅಂತ ಹೇಳಿಕೊಳ್ಳಲಿ ?

ಹಿಂಪಾ ಹತ್ತಿರ ತೊರೆಯಾಚೆ ಹಳ್ಳಿಯಲ್ಲಿ ಹುಟ್ಟಿದ್ದು ನಾನು.

ಗಂಗಾಧರ ಶಾಸ್ತ್ರಿಗಳೇ ನನ್ನ ತಂದೆ— ತುಂಗಾಬಾಯಿ ನಮ್ಮ ತಾಯಿ.

ಅಪ್ಪ ಹಾಕಿದ ಆಲದ ಮರ ಅಲ್ಲೇ ಕಲಿತಿದ್ದು ನನ್ನ ಕಸಬು, ಪೌರೋಹಿತ್ಯ.

ನಾನು ಪೌರೋಹಿತ್ಯ ಮೊದಲು ಸ್ವತಂತ್ರವಾಗಿ ನಡೆಸಿದ್ದು
ಸೇತುಪತಿಯ ಚೌಲ.

ಆ ಮೇಲೆ ಶಾಸ್ತ್ರೋಕ್ತವಾಗಿ ನಡೆಸಿದ್ದು—ನಾನೇ ಸ್ವಯಂ—
ಕಪೀನಿ ಪತಿಯ ಉಪನಯನ.

ಮುಂದಿನ ಮಂಗಳಕ್ರಮ, ನನ್ನ ಪೌರೋಹಿತ್ಯದಲ್ಲಿ.

ದಯಾಸಾಗರ—ಕಾವೇರಿ ಬಾಯಿ ಇವರ ಕಲ್ಯಾಣ ಮಹೋತ್ಸವ ಅದರ ಮುಂದೆ ಓಲಗ ಬಾರಿಸಿದಾಗ ನಾನೇ, ಒಬ್ಬನೇ,

ನರ್ಮದಾ ಬಾಯಿಗೆ ಬಳೆ ತೊಡಿಸಿದಾಗ ಆಶೀರ್ವಾದ ಮಾಡಿದ್ದು ನಾನೇ !

ಬ್ರಹ್ಮಪುತ್ರನ ನಾಮಕರಣ ನಾನೇ ಮಾಡಿಸಿದ್ದು—

ತಿಲ, ದರ್ಭೆ ಸಹಿತ ನಾನು ಮೊದಲು ಕೊಟ್ಟಿದ್ದು
ಗೋದಾವರಿ ಬಾಯಿಯ ಗಂಡ, ಗೋತ ಹೊಡೆದಾಗ—

ವೈಕುಂಠ ಸಮಾರಾಧನೆಗೆ ನನ್ನ ಭಾರ್ಯೆ ಗುಪ್ತಗಮನೆ ಸರಸ್ವತಿ ಜತೆಯಲ್ಲೇ ನಾನು ಹೋಗಿದ್ದು.

ಅಲ್ಲಿ ಒಂದು ಗಂಗೆ ಚೊಂಬು, ನದಿ ಅಂಚಿನ ಪಂಚೆ ಕೊಟ್ಟು ಕಳಿಸಿದರು. ಮನೆಗೆ ಹಿಂತಿರುಗುತ್ತಾ ನನ್ನ ಹೆಂಡತಿ ಕೇಳಿದಳು. ಇದೇನು ಅಂಚು ಅಂದರೆ ಪಂಚೆಗೆ ಹೊಸಾ ಹೊಸದಾಗಿದೆ. ಶಾಯಿ ಗಂಬಿ ನೀರು ಹರಿದ ಹಾಗಿದೆ ಹೊಳೆ ಹರಿದಾಗಿದೆ ಅಂತ ಅಂದಳು. ಆಗಲೇ ಇದೆಲ್ಲಾ ನನ್ನ ಮನಸ್ಸಿಗೆ ಹೊಳೆದಿದ್ದು— ಈ ನದೀ ಜೀವನ

ಕಡೆಗೂ ನನ್ನ ಗತಿ ಗಂಗಮ್ಮನ ಪಾಲೇ ಏನೊ ?

# ವನಿತೆಯರಿಗೆ

“ ಸಂಕ್ರಾಂತಿ ಎಳ್ಳು ಬೀರೋ ಹಬ್ಬ ಅಂತ ಮಾತ್ರ ಅಲ್ಲ-ಮಕ್ಕಳನ್ನು ಮಣೆ ಮೇಲೆ ಕೂರಿಸಿ ಕಾಸು ಬೋರೇಹಣ್ಣು ಅವರ ತಲೆಮೇಲೆ ಸುರಿದು, ಸುಖವಾಗಿ ಬಾಳು ಅಂತ ಹರಸೋ ಹಬ್ಬ ಕೂಡ ಕಣೆ-ಸುಮ್ಮನೆ ಹಸುವಿನ ಕೊಂಬಿಗೆ ಬಣ್ಣ ಹಚ್ಚಿ-ಗೊರಸಿಗೆ ಜರತ ರೇಖು ಅಂಟಿಸಿ- ಹಳೇ ಸೀರಾಜಿ ಸೀರೆ ಹೊದಿಸಿದರೆ ಸಾಲದು, ಗೊತ್ತಾಯ್ತೇನೆ ” ಎಂದರು ನಮ್ಮ ಯಜಮಾನರು.

ನನಗೆ ಮೂಗಿನ ಮೇಲೆ ಬೆರಳಿಟ್ಟುಕೊಳ್ಳೋ ಹಾಗಾಯಿತು. ಇವರಿಗೆ ಮಕ್ಕಳ ನೆನಪಾಗೋದೇ ಆಶ್ಚರ್ಯ. ಅವಕ್ಕೆ ಹಸೆಮಣೆ ಆರತಿ, ಬೋರೇಹಣ್ಣು ಇವೆಲ್ಲಾ ಹೇಗೆ ಬಂತು ಈ ಪೇಟೇಲಿ-ಈ ದಿನಗಳಲ್ಲಿ ಅಂತ.

“ ಯಾಕೆ ಅಂದರೆ ಹುಷಾರಾಗಿಲ್ವೆ ? ಇರೋದು ಒಂದು ಮಗು. ಅದರ ಯೋಚನೆ ಈ ಮೂರು ವರ್ಷಕ್ಕೆ ಇವತ್ತೇ ನೀವು ಮಾಡಿರೋದು ಏನು ಇದರ ಮರ್ಮ ”.

“ಅಲ್ಲಾ ಕಣೇ ನನಗೂ ಜ್ಞಾಪಕ ಬರ್ತಿಲ್ಲ ; ಆದರೆ ಸೋದರ ಮಾವನಿಂದ ಕಾಗದ ಬಂದಿದೆ. ಸಂಕ್ರಾಂತೀಗೆ ಅವರೂ ಇಲ್ಲಿಗೆ ಬರ್ತಾರಂತೆ. ಹಿರಿಯರು ಪೂರ್ವಕಾಲದವರು ಮನೆಗೆ ಬಂದರೆ, ಹಬ್ಬ ಹರಿದಿನ ಎಲ್ಲಾ ಶಾಸ್ತ್ರೋಕ್ತವಾಗಿ ಮಾಡಬೇಕು ಅಲ್ಲವೇನೆ ? ಇಲ್ಲದಿದ್ದರೆ ನಾವೆಲ್ಲಾ ಪಟ್ಟಣಕ್ಕೆ ಬಂದು ಕುಲಗೆಟ್ಟು ಹೋಗಿದ್ದೇವೆ ಅಂತ ಅನ್ನಿಸುಲ್ಲವೇ ? ” ಅವರಿಗೆ.

ಆಗಲೇ ನನಗೆ ಜ್ಞಾನೋದಯವಾದುದು. ಇವರಿಗೆ ಒಬ್ಬರೇ ಸೋದರ ಮಾವ, ಹೊಳೇ ನರಸೀಪುರದ ಆಚೆ ಹಳ್ಳಿಯಲ್ಲಿ, ಹೊಳೆ ಕೆಳಗಿನ ಜಮೀನಿಗೆಲ್ಲಾ ಒಡೆಯರು. ಹಿರಿಯರು ಮುಪ್ಪಾದವರು. ಮಕ್ಕಳಿಲ್ಲ ಮರಿಯಿಲ್ಲ. ಆದರೆ ಹೆಂಡತಿ ಕಡೆ ಸಂಬಂಧಿಗಳಿದ್ದಾರೆ. ಹಬ್ಬಕ್ಕೆ ನಮ್ಮನೇಗೆ ಬಂದರೆ ನಾವು ಅವರನ್ನೂ ಒಲಿಸಿ ಕೊಂಡರೆ, ಮಗು ಆರತಿ ನೆಪದಲ್ಲಿ ನಮಗೂ ಶಾಖಾಯ ಲವಣಾಯ ಏನಾದರೂ ಬರಬಹುದು ಸೊಸೈಟಿ ಸಾಲ, ಕ್ಲಬ್ಬಿನ ಬಿಲ್ಲು, ದರ್ಜಿ ಬಾಕಿ, ಇತ್ಯಾದಿ ಹಲವಾರು ಇದ್ದೇ ಇರುತ್ತಲ್ಲ

ನಮ್ಮ ಯಜಮಾನರು ಬಲು ಬುದ್ಧಿವಂತರಮ್ಮಾ !

ನಮ್ಮ ಕಪ್ಪಿಗೆ ಮೂರು ವರುಷ, ಅದನ್ನ ರಾಜ ಅಂತ ಕರೀತೀವಿ. ಈಗಿನ ಕಾಲದಲ್ಲಿ ರಾಜಕೀಯ ವಾತಾವರಣ ಬಿಸಿ ಬಿಸಿಯಾಗುತ್ತಿರುವಾಗ ಈ ಹೆಸರೇಕೆ

ಎಂದು ನೀವು ಕೇಳಬಹುದು, ಯಜಮಾನರಿಗೆ ಅವರ ತಾತನ ಹೆಸರಿಡಬೇಕು ಮಗೂಗೆ ಅಂತ. ನನಗೆ ನಮ್ಮ ತಾತನ ಹೆಸರಿಡಬೇಕೂ ಅಂತ. ಅವರ ತಾತ ಅವರು ಹುಡುಗರಾಗಿದ್ದಾಗ ಒಂದು ಕ್ರಿಕೆಟ್ ಬ್ಯಾಟ್ ಕೊಂಡು ಕೊಟ್ಟಿದ್ದರಂತೆ ನಮ್ಮ ತಾತ ನಾನು ಹುಡುಗಿ ಯಾಗಿದ್ದಾಗ ಒಂದು ಗಜ್ಜುಗದ ಗೂಡು ಕೊಟ್ಟಿದ್ದರು. ನಮ್ಮಿಬ್ಬರ ಜಗಳ ಉಂಡು ಮಗಿಯೋತನಕ ಮುಗಿಯಲೇ ಇಲ್ಲ. ಆಗಲೇ ರಾಜಿ ಮಾಡಿಕೊಂಡು ರಾಜ ಅಂತ ಹೆಸರಿಟ್ಟೆವು.

ರಾಜ ಬಹಳ ಶಹಣೆ, ನೋಡಲು ಅಂದ, ಆಡಲು ಚೆಂದ, ಬೀದೀಲಿ ಹೋಗೋ ಮುದುಕೀರೂ ಕೂಡ ನೆಟ್ಟಿಗೆ ಮುರಿದು ನಗುತ್ತಾ ಹೋಗುತ್ತಿದ್ದರು ಇಂತಹ "ತುರುಖ್ ಹಾಸ್" ಇಟ್ಟುಕೊಂಡು, ಸೋದರ ಮಾವನ ಹತ್ತಿರ ಕಡೇಪಕ್ಷ ಬಂದು ನಾಲ್ಕು ಎಕರೆ ತರೀ ಜಮೀನಾದರೂ ಗಿಟ್ಟಿಸದೇ ಇದ್ದರೆ ನಾವೇ ಪೆಚ್ಚು ಅನ್ನಿಸಿತಮ್ಮಾ ನನಗೂನು.

ಆದಕ್ಕೇ ಸಂಕ್ರಾಂತಿ ಅರತಿ ಅಂತ, ವೈಭವ, ವಿಜೃಂಭಣೆ, ಉತ್ಸಾಹ, ಜೋರು, ಆಡಂಭರ, ಎಲ್ಲಾ ಕೂಡಿ ಏರ್ಪಾಡು ಮಾಡಿಸಿದ್ದೆ, ಈ ಕೇರಿಯಲ್ಲಿನವರನ್ನೆಲ್ಲಾ ಕರಿಸಿದೆ.

ಸೋ. ಮಾವ ಬಂದರು ಹಬ್ಬದ ದಿನ, ಊರಿಂದ ಕಬ್ಬಿನ ಜಲ್ಲೆ, ವರ್ಷಕ್ಕಾಗೋ ಬೆಲ್ಲದ ಅಚ್ಚು, ಕೊಬ್ಬರಿ ಗಿಟಕು, ಎಲ್ಲಾ ತಂದರು. ಮಗುವಿಗೆ ಆಟಕ್ಕೆಂದು ಚಿನ್ನಪಟ್ಟಣದ ರೈಲೂ ತಂದರು.

ಬೆಳಗ್ಗೆ ಅಭ್ಯಂಗನ ಇತ್ಯಾದಿ, ಮಧ್ಯಾಹ್ನ ತಕ್ಕಮಟ್ಟಿಗೆ ರಸಗವಳ, ಬೆಳಗ್ಗೆ ಗುಂಡಪ್ಪನ ಹೋಟಲಿನಿಂದ ಜಾಂಗೀರ್ ತರಿಸಿದ್ದೆ. ನಾರಾಣಪ್ಪನ ಹೋಟಲಿನಿಂದ ಇಡಲಿ ಸ್ಪೆಷಲ್ಲಾಗಿ ತರಿಸಿದ್ದೆ. ಮರಿಯಪ್ಪನ ಅಂಗಡಿಯಿಂದ ಚಿಗುರು ಬುತ್ತಿ ತರಿಸಿಟ್ಟಿದ್ದೆ. ಸೋ. ಮಾವ ನನ್ನ ಹೊಗಳಿದ್ದೂ ಹೊಗಳಿದ್ದೇ! "ಎಂತಹ ಜಾಣೆ ಕಣೆ, ಎರಡೇ ವರ್ಷದಲ್ಲಿ ಇಷ್ಟು ಚೆನ್ನಾಗಿ ಅಡಿಗೆ ಮಾಡೋದು ಕಲಿತಿದ್ದೀಯಲ್ಲಾ. ನಿಮ್ಮ ಸೋದರ ಅತ್ತೇಗೆ ನೋಡು, ಅರವತ್ತರ ಹತ್ತಿರಕ್ಕೆ ಬಂತು ಒಂದು ಬಸುರು, ಒಂದು ಬಾಣಂತನ ಒಂದು ಮಗು ಒಂದು ಆರೈಕೆ ಅಂತ ಇಲ್ಲ. ಆದರೂ ಇನ್ನೂ ಅಡಿಗೆ ಮಾಡುಕ್ಕೆ ಬರುಲ್ಲ. ಈ ಸಾರ್ತಿ ಹಳ್ಳಿಗೆ ಹೋದರೆ ಅವಳನ್ನ ಇಲ್ಲೆ ಇದ್ದು ಅಡಿಗೆ ಕಲಿತುಕೋ ಅಂತ ಒಂದು ಹದಿನೈದು ದಿವಸ ಕಳಿಸಿಕೊಡ್ತೀನಮ್ಮಾ" ಅಂತ ಬೇರೆ ಹೊಗಳಿದರು. ನಂಗೋ ಮನಸ್ಸು ಹುಳ್ಳಹುಳ್ಳಗೆ ಎಲ್ಲಿ ಗುಟ್ಟು ರಟ್ಟಾಗುತ್ತೋ ಅಂತಾ–ಬೇಗ ಬೇಗ ಅಡಿಗೆ ಮನೆಗೆ ಹೋಗಿ ಆ ಪೊಟ್ಟಣದ ಕಾಗದ ನೂಲುದಾರ ಎಲ್ಲಾನೂ ಒಲೀಗೆ ಹಾಕಿದೆ. ನಮ್ಮ ಹುಷಾರಿ ನಮ್ಮ ಕೈಲಿ ಇರಬೇಕು ಅಲ್ಲವೇ ?

ಊಟ ಆಯ್ತು, ಸ್ವಲ್ಪಹೊತ್ತು ಮಲಗಿದ್ದರು. ಎದ್ದಮೇಲೆ ರಾಜನ ಜತೇಲಿ ಆಡೋಕ್ಕೆ ಅಂತ ಶುರು ಮಾಡಿದರು ನಮ್ಮ ಯಜಮಾನರು ರಾಜನ್ನ ಎತ್ತಿಕೊಳ್ಳೊಡೆ ಇಲ್ಲ. 'ಛೀ ಹೋಗೆ ಎತ್ತಿಕೊಂಡಾಗಲೆಲ್ಲಾ ಷರ್ಟು ಬದಲಾಯಿಸಬೇಕು ನಂ ಕೈಲಾಗೋಲ್ಲ ಅಂತ' ಬಿಟ್ಟುಬಿಟ್ಟಿದ್ದರು. ನಾನೂ ಕೂಡ ಹಳದಿ ಒಡಲಿನ ಸೀರೇನೇ ಆದಷ್ಟು ಉಡತಾ ಇದ್ದೆ ಸೋ. ಮಾವನಿಗೆ ಈ ಸೂಚನೆ ಹೇಗೆ ಕೊಡೋದು ಎಂತ ತಲೆ ಕೆರಕೊಳ್ಳುತ್ತಲೇ ಇದ್ದೆ.

ಅಷ್ಟರಲ್ಲೇ ಸೋ. ಮಾವ ರೇಗ್ತಾ ಒಳಕ್ಕೆ ಬಂದರು. ಏನೇ ! ಅಡಿಗೆ ಒಂದು ಕಲಿತೀನೇ ಹೊತ್ತ ಮಕ್ಕಳನ್ನ ಹೇಗೆ ಸಾಕಬೇಕು ಅಂತ ಗೊತ್ತಿಲ್ಲ ಅಲ್ವೇ !

'ಯಾಕೆ ಏನಾಯ್ತು, ಮಡಿ ಪಂಚೆ ಬೇಕೆ ಇದೆ ಕೊಡ್ತೀನಿ'.

'ಅಲ್ಲಾ ಕಣೆ ಅರ್ಧ ಗಂಟೆಯಿಂದ ಈ ಬೊಂಬೆ ರೈಲನ್ನ ಅವನ ಕೈಲಿ ಕೊಟ್ಟು ಆಡಿಸೋಣ ಅಂತ ಪ್ರಯಾಸ ಪಡ್ತಾ ಇದ್ದೀನಿ' ನನ್ನ ಮೀಶೆ ಮೇಲೆ ಅವನ ಕೈಯೇ ಏನಹಾ ಜಪ್ಪಯ್ಯಾ ಅಂದರೂ ಆ ರೈಲು ಮುಟ್ಟಲ್ಲ. ಮೂರು ವರುಷದ ಗಡವ ಮಕ್ಕಳ ಹಾಗೇ ಆಡ್ತಾನಲ್ಲೇ'.

ಅವನು ಈ ಮನೇಲಿ ಮೀಸೇನೇ ಕಂಡಿಲ್ಲ ಅಂದರೆ ಅದಕ್ಕೆ ಕಂಡಾಗ ಕೈ ಹಾಕ್ತಾನೆ. ನಾನನಕ ಮನಸ್ಸು ಮಾಡಿದ್ದೀನಿ ಬದುಕಿದ್ದರೆ, ಇವನಿಗೆ ಒಳ್ಳೇ ಭರ್ಜರಿ ಮೀಸೆ ಬಿಡಿಸುತ್ತೇನೆ ಅಂತ. ಇವರಿಗೆ ಹೇಳಿ ಹೇಳಿ ಸಾಕಾಯ್ತು'

'ಹಾಗೇ' ಅಂತೀಯಾ ದಿಟವಮ್ಮಾ ಗಂಡಸಿಗೆ ಮೀಸೆ ಇರಬೇಕಾದ್ದೇ. ನಾನು ಇವನಿಗೆ ಮೊದಲೇ ಹೇಳಿದೆ ಆದರೆ ನನ್ನನ್ನೇ ಹಾಸ್ಯಮಾಡಿಬಿಟ್ಟಿದ್ದ. ಇನ್ನೊಂದು ಸಾರಿ ಹೇಳ್ತೀನಿ ತಡಿ'

ಈ ಗಂಡಾಂತರ ತಪ್ಪಿತಲ್ಲಪ್ಪಾ, ಇನ್ನೊಂದು ಸಾಯಂಕಾಲ, ಇನ್ನೊಂದು ಹಗಲು ಸೋ. ಮಾವನನ್ನ ಖುಷಿ ಪಡಿಸಿದರೆ ಬಚಾವಾದೇವು' ಅಂತ ಅಂದು ಕೊಂಡೆ

ಆರತಿ ಅಕ್ಷತೆ ಎಲ್ಲಾ ಸಾಂಗವಾಗಿ ಆಯಿತು. ಬಂದ ಮುತ್ತೈದೆಯರೆಲ್ಲಾ, ಯಾರೇ ಅದು ಮರಾಟೆ ಸವಾರ್ ಮುದುಕ ಬಂದಹಾಗಿದೆ ವರಾಂಡದಲ್ಲಿ ಅಂದಿದ್ದೂ ಆಯಿತು, ಬೇಗ ಅವರ ಬಾಯಿ ಮುಚ್ಚಿಸಿದ್ದೂ ಆಯಿತು.

ರಾತ್ರಿ ಊಟ ಆಯಿತು, ರಾಜ ಮಲಗಿಕೊಂಡ, ನಮ್ಮ ಸಂಸಾರ ಶಾಸ್ತ್ರಯು, ಸೋ. ಮಾವನಿಗೆ ಸೂಕ್ಷ್ಮವಾಗಿ ಹೇಳಿಯೂ ಆಯಿತು.

ಬೆಳಿಗ್ಗೆ ತಿಂಡಿ ತೀರ್ಥ. ಇಡಲಿ, ಬೆಣ್ಣೆ, ಚಟ್ಟಣಿ ಪುಡೀನೂ ಮೂರು ಕಡೆಯಿಂದ ತಂದಿದ್ದೂ ಮುಗಿಯಿತು.

ಬಸ್ಸಿಗೆ ಬಿಟ್ಟು ಬರ್ತೀನಿ ಅಂತ ಯಜಮಾನರು ಸೋ. ಮಾವನ ಜತೇಲಿ ಹೋದರು.


ಬಂದರು, "ಏನೂ ಅಂದರೆ- 'ಹಣ್ಣೋ ಕಾಯೋ' ಅಂದೆ, ಹಣ್ಣಂತೆ ಕಾಯಿ ಸಿಡುಗುಟ್ಟುತ್ತಾ ಹೇಳಿದರು. ಮುದ್ದು ಮಾಡಿದ್ದೀರಿ ಮಗೂನ, ಹುಷಾರಾಗಿರಿ, ಇಬ್ಬರೂ ಚಿಕ್ಕವರು, ಮಕ್ಕಳನ್ನು ಸಾಕೋದು ಬುದ್ಧಿನಿಂದಲ್ಲ, ನಮ್ಮಾಕೇನ ಕಳಿಸ್ತೀನಿ ಬಂದು ಹದಿನೈದು ದಿವಸ ಮಕ್ಕಳನ್ನು ಸಾಕೋದು ಕಲಿಸಕ್ಕೆ ಅಂತ ಹೇಳಿ ಹೊರಟು ಹೋದರು.

ನಾನೂ ಸುಸ್ತಾದೆ.

ಸೋದರತ್ತೆ ಬಂದರು. ಹೇಗೂ ಹೆಂಗರುಳು ಬಂದಾಗ ಯಾರಿಗೂ ಕಾಣದ ಹಾಗೆ ನನಗೆ ಒಂದು ಜತೆ ಚಿನ್ನದ ಬಳೆ ತಂದುಕೊಟ್ಟರು. 'ಇವರು ನಿನ್ನನ್ನ ಬಲು ಹೊಗಳಿದರಮ್ಮಾ, ಸಂಸಾರ ಬಲು ಚೆನ್ನ ಅಂತೆಂದರು. ನಾನೂ ಅದಕ್ಕೆ ಒಂದು ಹದಿನೈದು ದಿವಸ ಸುಖವಾಗಿರೋಣ ಅಂತ ಬಂದೆ. ಇವನ್ನ ಕೊಟ್ಟೆ ಅಂತ ಅವರಿಗೆ ಹೇಳಬೇಡ' ಎಂದರು.

ಯಾಕೆ ಹೇಳುಕ್ಕೆ ಬಂದೆ ಅಂದರೆ, ಸೋ. ಮಾವನ್ನೇ ನಂಬಿದರೆ ಅಷ್ಟೇನೂ ಹಿತವಿಲ್ಲಾ. ಹೆಂಗಸಿಗೆ ಗತಿ ಹೆಂಗಸೇಮ್ಮಾ.

—ಗೌರಮ್ಮ.



"ನಮ್ಮ ಮನೆಯಂಗಳದಿ ಬೆಳೆದ ಈ ಹೂವ" ಇತ್ಯಾದಿ
ಯಾರು ಹಾಡುತ್ತಾರೋ ?

# ಹಾಕು! ಬೇಕು!

ಈಜಿಪ್ಟ್ ದೇಶದ ಪ್ರಾಚೀನ ಭಾಷೆಯಲ್ಲಿ ಬೇಕು ಹಾಕು, ಎಂಬ ಮಾತುಗಳಿದ್ದುವೇ ಹೊರತು, ಸಾಕು, ಎಂಬ ಮಾತೇ ಇರಲಿಲ್ಲವಂತೆ. ಜನರೆಲ್ಲ ಬೇಕು ಬೇಕು ಅಂತ ಹಗಲಿರುಳೂ ಹಾ ಹಾ ಕಾರ ಮಾಡುತ್ತ, ಕಡೆಗೆ ಹಾಕು, ಹಾಕು, ಎಂದು ಚಳುವಳಿ ಹೂಡುತ್ತಿದ್ದರಂತೆ. ನೈಲ್ ನದೀ ತೀರದ ಹೊಲಗದ್ದೆಗಳು ಜಗತ್ತಿನ ಅತೀ ಫಲವತ್ತಾದವು. ಆದರೂ, ರೈತರು ಅವುಗಳನ್ನು ಉತ್ತು ಬಿತ್ತಿ ಫಸಲು ತೆಗೆಯುವೆ, ರಾಜನಲ್ಲಿಗೆ ಹೋಗಿ ಬೇಕು ಹಾಕು ಬೇಕು ಹಾಕು ಎಂದು ಕೂಗುತ್ತಿದ್ದರಂತೆ. ಅವರಿಗೆ ಬುದ್ಧಿ ಹೇಳಿ ಅವರಿಂದ ಅನ್ನಾಹಾರಗಳನ್ನು ಬೆಳೆಯಿಸಲು ನೇಮಕವಾದ ಅಧಿಕಾರಿಗಳೂ ಕೂಡ, ರಾಜನು ಕೊಟ್ಟ ಸಂಬಳ ಸಾರಿಗೆ ಸಾಕು ಎನಲಾರವೆ ಹಾಕು ಬೇಕು ಎಂದು ಕೂಗುತ್ತ ದೇಶದಲ್ಲೆಲ್ಲ ಓಡಾಡಿದರಂತೆ. ಅಂಥವರನ್ನು ಹತೋಟಿಯಲ್ಲಿಟ್ಟಿರಲು ರಾಜನು ನಿಯಮಿಸಿದ ಗುಪ್ತ ಚಾರರಿಗೂ, ಸಾಕು ಎನ್ನಲು ಬರದು, ಅವರೂ ಬೇಕು ಬೇಕು ಹಾಕು ಹಾಕು ಎಂದು ಬಲವಂತ ಪಡಿಸುತ್ತಾ ಕೈ ನೀಡಿಕೊಂಡೇ ಕೆಲಸ ಮಾಡುತ್ತಿದ್ದರಂತೆ. ಎಲ್ಲರೂ, ಬೇಕು ಬೇಕು, ಎಂದು ಬೇಜವಾಬ್ದಾರಿ ನಡೆಯಿಸಿದರೆ, ಹಾಕುವವರು ತಾನೆ ಯಾರು? ದೇಶದಲ್ಲಿ ಬಹು ಬೇಗ ಬರಗಾಲ ಬಂತಂತೆ. ಆಗ, ರಾಜನು ತನ್ನ ಕುಲದೇವತೆಯಾದ ಒಸಿರಿಸ್ ಎಂಬ ಸೂರ್ಯದೇವನ ಗುಡಿಗೆ ಬಿಜಯಮಾಡಿ, ಏಳು ದಿವಸ ಅಖಂಡವಾಗಿ ತಪವಂಗೈದು ಕೈ ಮುಗಿದು ಮಂಡಿಯೂರಿ ಹಾಡಿದನಂತೆ. ಆಗ, ಗುಡಿಯೊಳಗಿಂದ ಅಶರೀರಿ ಒಂದು ಕೇಳಿಬಂತಂತೆ. "ಸಾ... ...ಕು" ಎಂಬ ಪದ ಸೃಷ್ಟಿಯಾಯಿತು. ಅದು ಜನರ ಮನವನ್ನು ಹೊಕ್ಕು ಅವರ ನಾಲಿಗೆಯ ಮೇಲೆ ನಲಿಯಿತು. ಬೇಕು—ಹಾಕುಗಳ ಭೀಕರ ಬಡಬಾಗ್ನಿ "ಸಾಕು" ಎಂಬ ಮಂತ್ರದಿಂದ ಇಂಗಿ ಆರಿತು.

# ಹೊಸದೊಂದು ಯಂತ್ರ

ಖಾನಾವಳಿಯಲ್ಲಿ ಕುಳಿತು ಎರಡು ದೋಸೆಗಳನ್ನು ಧ್ವಂಸಮಾಡಿ, ಕಾಫಿ ಒಂದು ಬಟ್ಟಲು ಕುಡಿದು, ಮಾಣಿ ತಂದುಕೊಟ್ಟ ಒಂಬತ್ತೂವರೆ ಆಣೆಯ ಬಿಲ್ಲನ್ನು ಕೈಯಲ್ಲಿ ಹಿಡಿದು, ತಲೆ ಕೆರೆಯುತ್ತಿದ್ದೆ; ನನ್ನೆದುರಿಗಿನ ಖಾಲಿ ಕುರ್ಚಿ ಭರ್ತಿಯಾಯಿತು. ತೀರ ಅಪರಿಚಿತ; ಪರಸ್ಥಳದವನಿರಬೇಕು; ಕಷ್ಟಜೀವಿ, ಊರಿಂದೂರಿಗೆ ಅಲೆದಾಡುತ್ತಿದ್ದ ವಿಮಾ ಏಜಂಟನ ಹಾಗೆ ಕಂಡ. ಕೈಯಲ್ಲೊಂದು ತೊಗಲಿನ ಚೀಲ ಬೇರೆ ಇತ್ತು; ಹರಿದು ತುಂಡಾಗಿದ್ದು. ಅದನ್ನ ಮೇಜಿನ ಮೇಲಿರಿಸಿ, ಆತ ನನ್ನ ಕಡೆ ಒಂದು ನಮಸ್ತೆಯನ್ನೆಸೆದ. ನಾನೂ ನಮಸ್ಕಾರ ಎಂದೆ, ಶಿಷ್ಟಾಚಾರದರೀತ್ಯಾ.

"ನಾನೂನು ನಿಮ್ಮಂತೆಯೇ ಒಬ್ಬ ನರಮನುಷ್ಯ; ನನಗೂ ಹಸಿವು, ದಾಹ ಇದೆ; ದಯಮಾಡಿ ನನಗೂ ಒಂದು ದೋಸೆ ಇಷ್ಟು ಕಾಫಿ ಕೊಡಿಸಿ" ಎಂದ; ತಿರುಪೆಯ ತಾಳ್ಮೆ ಇರಲಿಲ್ಲ ಅವನ ಧ್ವನಿಯಲ್ಲಿ ಬಹುದಿನದ ಗೆಳೆಯನಂತೆಯೇ ಮಾತನಾಡಿದ, ಸ್ನೇಹದ ಸಲಿಗೆಯಿಂದ, ಒಂಬತ್ತೂವರೆ ಆಣೆಗೇನೆ ಉದ್ದನೆಯ ಮುಖ ಮಾಡಿದ್ದ ನಾನು, ಆತನ ಬೇಡಿಕೆಯನ್ನು ಹೇಗೆ ಪೂರೈಸಲಿ? ಅರೆ ನಿಮಿಷ ಚಿಂತಿಸಿದೆ. ಬಂದದ್ದೆಲ್ಲ ಬರಲಿ, ಗೋವಿಂದನ ದಯೆ ಒಂದಿರಲಿ, ಎನ್ನುತ್ತ ದೋಸೆಗೆ ಆರ್ಡರ್ ಮಾಡಿದೆ. ಆಗಲೇ ಎದ್ದರೆ ಮರ್ಯಾದೆ ಅಲ್ಲ ಎಂದು ತುಸು ಹೊತ್ತು ಕುಳಿತೆ."

"ನಾನೊಬ್ಬ ವಿಜ್ಞಾನಿ, ನಮ್ಮ ಮನೆಯೇ ವೈಜ್ಞಾನಿಕರ ಮನೆ. ಹೊಸ ಹೊಸ ವೈಜ್ಞಾನಿಕ ಸಂಶೋಧನೆಗಳನ್ನು ನಡೆಯಿಸಿ, ಮಾನವನಿಗೆ ನವೀನ ಉಪಕರಣಗಳನ್ನು ಒದಗಿಸುವುದೇ ನಮ್ಮ ಕುಲಧರ್ಮ" ಎಂದ. ನನಗೆ ಹೆದರಿಕೆ ಹತ್ತಿತು, ಎದ್ದೇ ಬಿಡೋಣವೆನಿಸಿತು ಆದರೂ, ಆತನ ಕಣ್ಣಲ್ಲಿ ಆಗ ಮಿನುಗಿದ ಬೆಳಕು, ಆತನ ಚೀಲದೊಳಗಿಂದ ಆಗ ಹೊರಬಂದ ಬಣ್ಣದ ಕಾಗದಗಳು, ರೇಖಾಚಿತ್ರಗಳು, ಇವು ನನ್ನನ್ನು ಹಿಡಿದು ಕೂರಿಸಿದುವು. ನಿಜಕ್ಕೂ ಮೇಧಾವಿ ಇರಬಹುದೋ ಏನೊ? ಜನಾದರಣೆ ಇಲ್ಲದೆ, ಇಂಥ ಪ್ರತಿಭಾವಂತರು ಸಹಸ್ರಾರು ಮಂದಿ ನಮ್ಮ ನಿರ್ಭಾಗ್ಯ ಭೂಮಿಯಲ್ಲಿ ಅಸ್ತಮಾನವಾಗುತ್ತಿರುವುದು ಶೋಚನೀಯವೇ ಸರಿ. ಈ ವಿಷಮ ಪರಿಸ್ಥಿತಿಯನ್ನು ಹೇಗೆ ಸುಧಾರಿಸುವುದೆಂದು ನನ್ನಂಥವರಿಂದ ಯೋಚನೀಯವೇ ಸರಿ....ಎಂದೆಲ್ಲ ಅಂದುಕೊಂಡೆ.

"ಇಕೊ! ಈ ಆಹಾರದ ಬಿಕ್ಕಟ್ಟು....ಇದನ್ನು ಬಗೆಹರಿಸಲಾಗದೆ, ಜವಾಹಿರಲಾಲರಿಂದ ಹಿಡಿದು ಜವರೇಗೌಡರ ವರೆಗೂ ಜನ ಜಂಜಡವಾಗುತ್ತಿದ್ದಾರೆ, ನನ್ನ ವಿಜ್ಞಾನ ಬುದ್ಧಿಗೆ, ಇದು ತೀರ ಸರಳ" ಎಂದ.

ನನ್ನ ಕಿವಿ ನೆಟ್ಟಗಾಯಿತು, ಯಾವ ಹುತ್ತದಲ್ಲಿ ಯಾವ ಹಾವಿರುತ್ತದೋ ? " ನಿಮ್ಮ ಉಪಾಯ ಏನು, ಸ್ವಾಮಿ ? " ಎಂದು ಕೇಳಿದೆ.

ನಮ್ಮ ಸನಾತನ ಧರ್ಮದಲ್ಲಿ ಋಷಿಗಳು ಇದಕ್ಕೆ ಪರಿಹಾರ ಹೇಳಿ ಇದ್ದಾರೆ ಒಂದು ತಿಂಗಳು ಅನ್ನಾಹಾರ, ಅನಂತರ ಫಲಾಹಾರ ಒಂದು ತಿಂಗಳು, ಅನಂತರ ಕ್ರಮವಾಗಿ ಸೊಪ್ಪು ಸೊದೆ ತರಗೆಲೆ ಅನಂತರ ನೀರು, ವಾಯು, ಅನಂತರ ಆಕಾಶ ನಂತರ ಪಾತಾಳ....ಎಂದು ಅವರು ತಪಸ್ಸನ್ನಾಚರಿಸಿ ಅಮೃತತ್ವವನ್ನು ಸಾಧಿಸಿಲ್ಲವೆ ? ಈಗ, ನಾನು ಲೆಕ್ಕ ಹಾಕಿದೇನೆ ಸಾಮಾನ್ಯವಾಗಿ, ನಾವು ಒಪ್ಪತ್ತಿನ ಊಟದಲ್ಲಿ ೮೪ ಕಬಳವನ್ನು ಒಳಕ್ಕೆ ಸೇರಿಸುತ್ತಿದೇವೆ. ದಿನಕ್ಕೊಂದು ಕಬಳ ಕಡಮೆ ಮಾಡುತ್ತ ಬಂದರೆ, ೩ ತಿಂಗಳು ಪೂರ್ತಿಯಾಗುವುದರೊಳಗೆ, ನಾವೂ ವಾಯು ಆಕಾಶಗಳಿಗೆ ಸಿದ್ಧರಾಗುತ್ತೇವೆ...." ಎಂದ. ಆ ಮಾತನ್ನು ಕೇಳುತ್ತ, ನಾನು ಸುಮ್ಮನೆ ತಲೆದೂಗುತ್ತ ಕುಳಿತಿದ್ದೆ ಎಂದು ತಿಳಿಯಬೇಡಿ. ನಾನು ಅಡ್ಡ ಮಾತು ತೆಗೆದೆ " ಋಷಿಗಳು ಭಗವಧ್ಯಾನದಲ್ಲಿ ತಲ್ಲೀನರಾಗಿದ್ದದ್ದರಿಂದ, ಅವರ ಮನಸ್ಸಿಗೆ ತಮ್ಮ ದೇಹಶೋಷಣೆ ತಿಳಿಯಲಿಲ್ಲ; ಆಲಸ್ಯ ತೋರಲಿಲ್ಲ; ಆದರೆ....' ಎಂದು ಪ್ರಾರಂಭಿಸಿದೆ.

" ಹಾಂ ! ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ, ನನಗೂ ಗೊತ್ತು ಅದ್ದರಿಂದಲೇ. ಅದಕ್ಕಾಗಿಯೇ, ನಾನೊಂದು ಯಂತ್ರ ಕಂಡು ಹಿಡಿದಿದ್ದೇನೆ ಕಡಮೆ ಆಹಾರದಿಂದ ದೇಹ ಶೋಷಣೆಯಾಗುತ್ತಿರುವುದನ್ನು ಕಂಡು ಯಾರು ಇನ್ನು ಗಾಬರಿಗೊಳ್ಳುವಂತಿಲ್ಲ, ಈ ಯಂತ್ರ, ತೂಕ ನೋಡುವ ಯಂತ್ರ ಕೇವಲ ಎಂಟೇ ರೂಪಾಯಿ ಕಿಮ್ಮತ್ತು. ದೇಹ ಶೋಷಣೆ ಹೆಚ್ಚುತ್ತ ಹೆಚ್ಚುತ್ತ, ಇದು ದಿನೇ ದಿನೇ ಹೆಚ್ಚು ಹೆಚ್ಚು ತೂಕವನ್ನು ತೋರಿಸುತ್ತದೆ ಆಹಾರವೇ ಬೇಡವೆನಿಸುವ ೮೫ನೇ ದಿನದಲ್ಲಿ, ಅವನ ತೂಕ ಮೊದಲ ದಿನಕ್ಕಿಂತ ಮೂರು ಬಾರಿ ಹೆಚ್ಚಾಗಿರುತ್ತದೆ ಅವನು ಅಂದು ಹಿಗ್ಗಿ ಹೀರೇಕಾಯಿ ಆಗಿ ಕುಣಿಯುತ್ತಾನೆ.. ಹೇಗಿದೆ ಉಪಾಯ ? ನಾನು ಇದನ್ನು ಜಯರಾಂ ದಾಸರಿಗೆ ಹೇಳಿದೆ ಅವರಿಗೆ ಆಸಕ್ತಿ ಕಡಿಮೆ, ಇದು ಪ್ರಜಾ ಸರ್ಕಾರದ ಯುಗ, ನೀವು ಪೆಪರಿನವರ ಹಾಗೆ ಕಂಡಿರಿ ! ನೀವು ಪ್ರಚಾರ ನಡೆಸಿ ದೇಶವನ್ನು ಸಮೂಲಕ ಉದ್ಧಾರ ಮಾಡಿ ಪುಣ್ಯ ಕಟ್ಟಿಕೊಳ್ಳಿ .. ನೋಡಿದಿರಾ ! ಯಂತ್ರದ ಪ್ಲಾನು ! .... ಕೆಂಪು ಗೆರೆಯೇ ಸುಳ್ಳು ತೂಕ ತೋರಿಸುವ ವಿಧಾನ ..." ಎಂದು ಹೇಳಿ ಆತ, ಚೀಲದೊಳಗಿಂದ ಕಾಗದದ ಸುರುಳನ್ನು ಹೊರತೆಗೆದು ಬಿಚ್ಚಿ ಮೇಜಿನ ಮೇಲೆ ಹರವಿದ.

ಅಷ್ಟು ಹೊತ್ತಿಗೆ, ಹೋಟಲು ಬಾಗಿಲು ಮುಚ್ಚುವ ವಿಷಗಳಿಗೆ ಬಂತು. ನಾನು ಎದ್ದು, ಬಿಲ್ಲನ್ನೂ ಕೂಡ ಕೊಡದೆ ಹೊರ ಹೋದೆ

---

# ಕವಿ ಕಾಳಿದಾಸನ ವಂಶಸ್ಥ

---o---

ಸುಮಾರು ೮ ವರ್ಷಗಳಾಯಿತು. ನನಗೆ ಆತನ ಪರಿಚಯಲಾಭ ದೊರೆತು. ಆದರೂ, ವಿಷಯವನ್ನು ಹೊರಗೆಡಹದೆ ಕನ್ನಡಿಗ ಬಾಂಧವರಿಂದ ಮುಚ್ಚಿರಿಸಿದ್ದಕ್ಕಾಗಿ ಕ್ಷಮೆ ಬೇಡುತ್ತೇನೆ. ಅವರನ್ನು ನಾನು ಮೊದಲು ಭೆಟ್ಟಿಯಾದದ್ದು ಉಡುಪಿ ಹೋಟೆಲಿನಲ್ಲಿ; ಕಾರ್ಯಾರ್ಥವಾಗಿ ಬಂದಿದ್ದರು, ಬೆಂಗಳೂರಿಗೆ; ಯಾವುದೋ ಕ್ರಿಮಿನಲ್ ಮೊಕದ್ದಮೆ; ಅಬ್ಕಾರಿ ಕಂಟ್ರಾಕ್ಟಿಗೆ ಸಂಬಂಧಿಸಿದ್ದು.

ಕಾಳಿದಾಸನ ಗೋತ್ರದ ಹೆಸರು ವಾಗರ್ಥಗೋತ್ರ ಎಂಬುದನ್ನು ಡಾ|| ಷಿನ್ ವೆಲ್‌ರವರು ೧೯೫೮ರಲ್ಲಿ ಕಂಡುಹಿಡಿದು ಪ್ರಕಟಿಸಿದಾಗಿನಿಂದ, ಭಾರತ ವರ್ಷದ ವಾಗರ್ಥದವರಿಗೆಲ್ಲ ಚತುರ್ಭುಜ ಬೆಳೆಯುತ್ತಿರುವುದು ಚರಿತ್ರಪ್ರಸಿದ್ಧ. ಆದರೆ, ಅಂಥ ನೂರಾರು ಮಂದಿಯಲ್ಲಿ, ನಾನು ಉಡುಪಿ ಹೋಟಲಿನಲ್ಲಿ ಸಂಧಿಸಿದ ತಮ್ಮಯ್ಯನವರೊಬ್ಬರಿಗೆ ಮಾತ್ರವೇ ಎರಡನೆಯ ಮಹಾ ಭಾಗ್ಯ ದೊರೆತದ್ದು. ಅದೇನೆಂದರೆ, ತಮ್ಮಯ್ಯನವರ ತಾಯಿ ಹೆಸರು ಪಾರ್ವತಿ. ತಂದೆ ಹೆಸರು ಪರಮೇಶ್ವರ. ಹುಂ. ಜಗತಃ ಪಿತೃಗಳು! ಕಾಳಿದಾಸನ ತದ್ವತ್! ವಾಗರ್ಥ ಗೋತ್ರ; ಅದೇ ಪಿತೃಗಳು! ಅಂದಿನಿಂದ, ತಮ್ಮಯ್ಯನವರು ಕಾಳಿದಾಸನ ವಂಶಸ್ಥರೆನಿಸಿಕೊಂಡು, ಕಾವ್ಯ, ನಾಟಕ, ಅಲಂಕಾರಗಳನ್ನು ಬರೆಯ ತೊಡಗಿದ್ದರು. ಚಿಕ್ಕಂದಿನಿಂದಲೂ, ಮೇಘಗಳನ್ನು ತಲೆ ಎತ್ತಿ ನೋಡುವ ಅಭ್ಯಾಸ ತಮ್ಮಯ್ಯನವರದಂತೆ. ಎಂಟೊಂಬತ್ತು ವರ್ಷ ವಯಸ್ಸಾಗುತ್ತಲೂ, ಉಂಗುರ ಹುಷಾರು? ಜಾರಿಬಿಟ್ಟೀತು! ಎಂದು ಅವರು ಆಗಾಗ ಕೂಗುತ್ತಿದ್ದರಂತೆ. ವಂಶಪರಂಪರೆ ಎಲ್ಲಿಗೆ ಹೋಗುತ್ತೆ. ಸಂಸ್ಕಾರ ಬಲದ ಸೆಳೆತದಿಂದ ತಪ್ಪಿಸಿಕೊಳ್ಳಲು ಸಾಧ್ಯವೆ?

ತಮ್ಮಯ್ಯನವರು ಇದುವರೆಗೂ ತಮ್ಮ ಕೃತಿಗಳನ್ನು ಪ್ರಕಟಿಸಿಲ್ಲ. ರಾಜಾಸ್ಥಾನಕ್ಕೆ ಮಾತ್ರ ಯೋಗ್ಯವಾದ ತಮ್ಮ ಮಹಾ ನಾಟಕಗಳನ್ನು ಕೇವಲ ಸಂತೆಯ ಗೊಂದಲ ಮಾಡಲು ಅವರಿಗೆ ಮನಸಿಲ್ಲ. ಕಂಬ ಕೀಟ್ಸ ಪೋಪ ಶೆಲ್ಲ್ಯಾದಿಗಳ ಕಿವಿಗೆ ಸುರಿಯದೇ ಕಾದ ತಮ್ಮ ಕಾವ್ಯಾಮೃತವನ್ನು ಕಾರ್ಲ್ ಮಾರ್ಕ್ಸ್ ಶಿಷ್ಯರು ಎಲ್ಲಿ ಕಸಿದುಕೊಳ್ಳುತ್ತಾರೋ ಎಂಬುದು ಅವರ ಹೆದರಿಕೆ.

ತಮ್ಮಯ್ಯನವರು ಬಲು ನಿದಾನಿಗಳು; ಎಲೆ ಮರೆ ಕಾಯಿಗಳು. ಇಷ್ಟರಲ್ಲೇ ಮನೆ ಮಠ ಬಿಟ್ಟು ಅವರು ಬೆಂಗಳೂರಿನ ಒಂದು ಸಹೃದಯ ಸಂಸ್ಥೆಗೆ ಸೇರುವ ಸಂಭವವಿದೆ.

---

# ಅದಲು - ಬದಲು

ಈ ಲಕ್ಷ್ಮೀ ಇದ್ದಾಳಲ್ಲ-ಯಾವ ಲಕ್ಷ್ಮೀ ಅಂತೀರಿ-ಶ್ರೀಮನ್ನಾರಾಯಣನ ಜತೇಲಿ ಕ್ಷೀರಸಾಗರದಲ್ಲಿ ಮೆರೆಯುತ್ತಾಳಲ್ಲಾ ! ಆ ಭಾಗ್ಯಲಕ್ಷ್ಮಿ. ಇವಳ ಚರ್ಯೆಯೇ ನನಗೆ ಹಿಡಿಸಲ್ಲ ನೋಡಿ. ಅಟ್ಟಿಸಿಕೊಂಡು ಹೋದರೆ ಓಡಿ ಓಡಿ ಕೈಗೆ ಸಿಕ್ಕದೆ ಹೊರಟು ಹೋಗ್ತಾಳೆ. ನಿನ್ನ ಸಹವಾಸ ಬೇಡ ಅಂತ ಮುನಿದು ಕೊಂಡರೆ ಬಂದು ಒಲೀತಾಳೆ. ಸುಮ್ಮನೆ ಒಲಿಯೋದು ಅಂತೀರಾ, ಒದ್ದು ಒಲೀತಾಳೆ

ನಲವತ್ತು ವರ್ಷ ಸಾಚಾ ಜೀವನ ಮಾಡಿ ಹಣ ಸಂಪಾದಿಸಬೇಕು ಅಂತ ಒದ್ದಾಡಿದೆ. ಸತ್ಯ, ಅಹಿಂಸೆ, ನೂಲು, ನನ್ನ ಮುಖ್ಯ ಮಂತ್ರಗಳಾಗಿದ್ದುವು. ಸತ್ಯದ ಅನುಸರಣೆಯಿಂದ ನನ್ನ ವ್ಯಾಪಾರ ಕುಸಿದು ಬಿದ್ದಿತ್ತು. ನಮ್ಮಪ್ಪ ಬಿಟ್ಟು ಹೋದ ಹತ್ತುಸಾವಿರ ರೂಪಾಯಿ ಭಂಡವಾಳ ದಾರೀಪಾಲಾಯ್ತು. ಅಹಿಂಸೆಯಿಂದ ನನಗೇ ಹಿಂಸೆಯಾಯಿತು. ನೂಲು, ವರ್ಷ ಎಲ್ಲಾ ನೂತಿದ್ರೂ, ಮಗನ ಉಡಿದಾರಕ್ಕೂ ಸಾಲಲಿಲ್ಲ. ಜೀವನ ಕಷ್ಟತರವಾಯ್ತು. ಹೆಂಡತಿಗೇ ಬೇಡಾದ ಮಕ್ಕಳಿಗೆ ತಂದೆಯ ನೆನಪೇ ಇಲ್ಲದಂತಾಯ್ತು.

ಕಡೇ ಐದು ರೂಪಾಯಿ ನೋಟು. ನನಗೂ, ವಿಷ ತೆಗೆದುಕೊಂಡು ಪ್ರಾಣ ಬಿಡುಕ್ಕೂ ಇದೇ ಅಂತರ, ಈ ಐದು ರೂಪಾಯನ್ನ ಜೀವನಕ್ಕೆ ಉಪಯೋಗಿಸಿದರೆ ವಿಷ ತೆಗೆದುಕೊಳ್ಳುವುದಕ್ಕೆ ದುಡ್ಡು ಇರಲ್ಲವಲ್ಲ ಮುಂದೆ ಕಷ್ಟದ ದಿನಗಳು ಅಂತ ಲೆಕ್ಕ ಹಾಕಿ ಗ್ರಂಧಿಗೆ ಅಂಗಡಿಗೆ ಪಾಷಾಣ ಕೊಂಡು ತರಲು ಹೋದೆ.

ಆ ಗ್ರಂಧಿಗೆ ಅಂಗಡಿಯವನು ಗೋವಾ ಲಾಟರಿ ಟಿಕೆಟ್ಟನ್ನ ಮಾರುತ್ತಿದ್ದಾತ. ಒಂದು ರೂಪಾಯಿನ ಪಾಷಾಣ ಕೊಡಯ್ಯ, ನಮ್ಮ ಮನೆಯಲ್ಲಿ ಒಂದು ದೊಡ್ಡ ಕೆಟ್ಟ ಎತ್ತು ಇದೆ ಅದು ಕುಂಟು, ಕುರುಡು, ಅದನ್ನು ಮುಕ್ತಿಯ ಮಾಡಬೇಕು ಎಂದೆ. ಒಂದು ರೂಪಾಯಿ ಪಾಷಾಣ ಕಟ್ಟಿಕೊಟ್ಟ. ಆನೆ, ಐರಾವತಕ್ಕೆ ಕೊಟ್ಟರೂ ಅದು ಐದೇ ನಿಮಿಷದಲ್ಲಿ ಫಟ್ಟ ಅಂದ. ಐದು ರೂಪಾಯಿ ನೋಟು ಕೊಟ್ಟೆ ಚಿಲ್ಲರೆ ನಾಲ್ಕು ರೂಪಾಯಿ ಅವನಿಗೆ ಹಿಂದಿರುಗಿ ಕೊಡಲು ಎಲ್ಲಾ ವ್ಯಾಪಾರಿಗಳಿಗೂ, ಇದ್ದ ಸಂಕೋಚ. ಸ್ವಾಮಿ ಒಂದು ಗೋವಾ ಲಾಟರಿ ಟಿಕೆಟ್ ಕೊಳ್ಳಿ, ನಿಮ್ಮ ಎತ್ತಿನ ಪುಣ್ಯದಿಂದ ನಿಮಗೂ ದೆಸೆ ಖುಲಾಯಿಸಬಹುದು ಎಂದ.

ಅಲ್ಲಾ ! ಕೊಡೊ ಕಾಲದಲ್ಲಿ ಹೇಗೆ ಹೇಗೆ ಕೊಡ್ತಾನೋ ! ಪಾಷಾಣ ಇಸುಕೊಳ್ಳೋನಿಗೆ ಗೋವಾ ಲಾಟರಿ ಟಿಕೆಟ್ ಹೆಚ್ಚೆ ?

ಇರಲಿ ಅಂತ ಕೊಂಡುಕೊಂಡೆ.

ಮನೆಗೆ ಬರ್ತಾ ಯೋಚಿಸಿದೆ. ಈ ಲಾಟರಿ ಟಿಕೆಟ್ಟಿನ ಭವಿಷ್ಯ ನೋಡಿಯೇ ಬಿಟ್ಟು ನಂತರ ಹೇಗಿದ್ದರೂ ಪಾಷಾಣ ಇದ್ದೇ ಇದೆ ಅಂತ ತೀರ್ಮಾನಿಸಿದೆ.

ಲಾಟರಿ ಮುಗಿಯಿತು. ಏನಂದ್ರೇನಾಯಿತು ಗೊತ್ತೇ? ನೀವು ಊಹಿಸಿದಂತೆ ನನಗೇ ಪ್ರಥಮ ಬಹುಮಾನ, ದುಡ್ಡೆಷ್ಟು ಗೊತ್ತೇ, ಐದು ಲಕ್ಷ ರೂಪಾಯಿ.

ಈ ಲಕ್ಷ್ಮೀ ಚಕ್ಕಂದ ನೋಡಿದಿರಾ !

ಮೊದಲು ಆ ಗ್ರಂಧಿಗೆ ಅಂಗಡಿಗೆ ಹೋದೆ. ಅಯ್ಯಾ? ನೀನು ಕೊಟ್ಟ ಪಾಷಾಣ ನನ್ನ ಎತ್ತಿಗೆ ಇನ್ನು ಪ್ರಯೋಜನ ಇಲ್ಲ ಇದನ್ನು ಹಿಂತಿರುಗಿ ತೆಗೆದು ಕೊಂಡು ರೂಪಾಯಿ ಕೊಡು ಎಂದೆ. ಅವನೇನು ಮಾಡಿದ ಗೊತ್ತೇ? ಲಕ್ಷ್ಮೀ ಒಲಿದವನಿಗೆ, ಒದ್ದುಕೊಂಡು ಒಲಿದವನಿಗೆ ಮಾಡುವಂತೆ ಆರುತಿಂಗಳ ಹಿಂದೆ ಮಾರಿದ್ದ ಪಾಷಣ ಹಿಂತಿರುಗಿ ತೆಗೆದುಕೊಂಡು, ರೂಪಾಯಿ, ನೋಟಲ್ಲ ! ಬೆಳ್ಳಿ ರೂಪಾಯಿ ಹಿಂತಿರುಗಿ ಕೊಟ್ಟ.

ಆಗಲೇ ನನಗೆ ಮನದಟ್ಟಾಯಿತು. ಇನ್ನುಮೇಲೆ ನನ್ನ ಜೀವನವೇ ಮಾರ್ಪಾಡು. ಹಿಂದಿನ ಮೂಲ ಮಂತ್ರಗಳೆಲ್ಲಾ ಮೂಲೆಗೆ ಇರಲಿ. ಇನ್ನು ನಾನು ನನ್ನನ್ನು ಕಂಡುಕೊಳ್ಳುತ್ತೇನೆ ಎಂದು ನಿರ್ಧರಿಸಿದೆ.

* * *

ಧರ್ಮಪ್ರವರ್ತಿ, ಸಮಾಜೋದ್ಧಾರಕ, ಸಾಹಿತ್ಯಪ್ರೇಮಿ, ಸಂಗೀತ ಕಲೋಪಾಸಕ ಇತ್ಯಾದಿ ಬಿರುದಾಂಕಿತನಾದ ನಾನು ನನ್ನ ಎರಡನೇ ಜೀವನಕ್ಕೆ ಆರೇ ತಿಂಗಳಲ್ಲಿ ಕಾಲಿಟ್ಟೆ. ಬಿರುದುಗಳನ್ನು ಸಂಪಾದಿಸಲು ಸುಮಾರು ಎರಡು ಲಕ್ಷ ಧರ್ಮ ಕೊಡಬೇಕಾಯಿತು. ಆದರೆ, ಆ ಧರ್ಮ ಕೊಟ್ಟುದರ ಸಲುವಾಗಿ ಲಕ್ಷ್ಮೀ ಒಲಿದಪ್ರಯುಕ್ತ, ದೇಶದ ಆರ್ಥಿಕ ಕಾರ್ಯ ಕಲಾಪಗಳಲ್ಲಿ ನನಗೂ ಒಂದು ಚೂರು ಸಿಕ್ಕಿತು ಆ ಚೂರು ಹತ್ತು ಲಕ್ಷ ಸಂಪಾದಿಸಿ ಕೊಟ್ಟಿತು ಒಂದು ರೀತಿಯಾದ ವೈರಾವಣ ಧರ್ಮ. ಒಂದು ರೂಪಾಯಿ ದಾನ ಕೊಟ್ಟರೆ. ನೂರು ರೂಪಾಯಿ ಲಾಭ ಬರುತ್ತಿತ್ತು ಆ ಧರ್ಮ ಸಂಸ್ಥೆಯಿಂದಲೇ ? ಈ ರುಚಿಯನ್ನು ಈ ತತ್ವವನ್ನ ಅರಿತ ನಾನು ಧರ್ಮ ಮಾಡಿದ್ದೂ ಮಾಡಿದ್ದೇ ?

ಈ ಜೀವನ ಸಮಯಕ್ಕೇ ನೋಡಿ— ಅದಲು-ಬದಲು ಶುರುವಾಗಿದ್ದು.

ಸಾಹಿತಿಗಳ ಗೋಷ್ಠಿಯಾಗಲಿ, ಸಂಗೀತ ಸಮ್ಮೇಳನವಾಗಲೀ, ಬೇಂದ್ರೆ ಮಾತನಾಡಲಿ, ಎಂ ಎಸ್ ಹಾಡಲೀ, ಕಾರಂತ ಕತೆ ಹೇಳಲಿ ಪಾಲಾಂಕ ಚುಟುಕ ಚುಟುಕಿಸಲೀ, ಏನೇ ಆಗಲೀ, ಎಲ್ಲೇ ಆಗಲೀ ನಾನೇ ಅಧ್ಯಕ್ಷ.— ಸುಂಕ ಐನೂರರಿಂದ ಐದು ಸಾವಿರದವರಿಗೆ—

ಆಗಲೇ ನನಗೆ ಅನಿಸಿದ್ದು ಅಯ್ಯೋ ! ಹುಡುಗನಾಗಿದ್ದಾಗ ಆ ಫ್ರೆಂಚ್ ಓದುವ ಬದಲು ಕನ್ನಡ ಓದಿದ್ದರೆ ಚೆನ್ನಾಗಿತ್ತು ಎಂತ ಸಂಗಾತಿಗಳೊಡನೆ ಇಸ್ಪೀಟು ಆಡುವ ಬದಲು ಸಂಗೀತ ಕಲಿತಿದ್ದರೆ ಚೆನ್ನ ಅಂತ. ಅಧ್ಯಕ್ಷನಾದರೆ ವಿಷಯದ ವಿಷಯ ನಾಲ್ಕು ವಿಶದ ಮಾತುಗಳನ್ನೂ ಆಡದೇ ಹೋದರೆ ಸಭೆಗೆ ಕಳೆ ಕಟ್ಟಲ್ಲ ಎಂದು ಗೊತ್ತಾಗಿತ್ತು.

" It is never too late to Mend ".

ಎಲ್ಲೋ ಕೇಳಿದಹಾಗೆ ಜ್ಞಾಪಕ. ಲಕ್ಷ್ಮೀಯು ಒಡೆಯೇ ಲಿಂಗವಲ್ಲಾ ಇದು. ಪರೀಕ್ಷಿಸಿಲ್ಲ

ಮಾರನೆ ದಿನ ಇಬ್ಬರು ಗುರುಗಳನ್ನೂ ಸಂಪಾದಿಸಿದೆ. ಮೂವತ್ತು ರೂಪಾಯಿನ ಕನ್ನಡ ಗುರು ಒಬ್ಬ- ಮೂವತ್ತು ರೂಪಾಯಿನ ಸಂಗೀತದ ಗುರು ಒಬ್ಬ ನನಗೆ ಆಗ್ಗ ನಲವತ್ತು ಮೂರು, ಅವರಿಗೆ ಐವತ್ತು ಮೂರು—ವಯಸ್ಸು— ಐವತ್ತಾ ಆರು, ಸಂಬಳ.

ಆರು ತಿಂಗಳು ಪಾಠ ಆಯಿತು.

ಕನ್ನಡದ ಗುರು ತನ್ನ ಸಾಹಿತ್ಯವನ್ನು ಮರೆತಿದ್ದ.

ಸಂಗೀತದ ಗುರು ತಪ್ಪು ತಾಳ ಹಾಕಲಾರಂಭಿಸಿದ್ದ.

ಇಬ್ಬರೂ ಹತ್ತು ರೂಪಾಯಿ ಹೆಚ್ಚು ಸಂಬಳ ನನ್ನಿಂದ ಪಡೆಯುತ್ತಿದ್ದರು.

* * *

ಒಂದು ದಿನ ಕನ್ನಡದ ಗುರುವಿಗೆ ಹೇಳಿದೆ. ಗುರುಗಳೇ ಸಂಗೀತದ ಗುರುಗಳು ಬಲು ಪ್ರಯಾಸ ಪಡುತ್ತಾರೆ ಆದರೆ ನನಗೆ ತಾಳದ ತಳವೇ ಗೊತ್ತಾಗಲಿಲ್ಲ. ರಾಗದ ರೂಪೇ ತಿಳಿಯಲಿಲ್ಲ, ಝಂಪೆಯ ಸೊಂಪೇ ಕಂಡಿಲ್ಲ.

ಅಯ್ಯೋ ಅದೇನಯ್ಯಾ ಕಷ್ಟ ! ಎಂತ ಆತ ನನಗೆ ಸಂಗೀತ ಹೇಳಲಾರಂಭಿಸಿದ. ಮೂರೇ ದಿನಗಳಲ್ಲಿ ನನಗೆ ಸಂಗೀತದ ಚಪರೆ ಅರ್ಥವಾಯಿತು.

* * *

ಸಂಗೀತದ ಗುರೂಜಿಗೆ ಹೇಳಿದೆ " ಗುರೂಜೀ ಕನ್ನಡ ಪಂಡಿತರು ಪಂಪ, ರನ್ನ, ಕುವೆಂಪು, ದ. ರಾ. ಎನ್ನುತ್ತಾರೆ ಪದ್ಯದ ಮೂಲವೇ ತಿಳಿಯಲಿಲ್ಲ ಗದ್ಯದ ಗತಿಯೇ ಅರ್ಥವಾಗಲಿಲ್ಲ ಅಂತ ".

"ಅಯ್ಯೋ ಇದೇನು ಮಹಾ! ನಾನು ಹೇಳುತ್ತೇನೆ ಕೇಳು ಎಂದು ಸಂಗೀತ ಗುರೂಜೀ ಸಾಹಿತ್ಯದ ಸ್ವರೂಪ ಹೇಳಿಕೊಟ್ಟರು. ಪಂಪನ ಆದಿಶಕ್ತಿ ರನ್ನನ ಮಧ್ಯಮ ಶೌರ್ಯ, ದ.ರಾ. ಯಾವರ ಇಂದಿನ ಗತಿ, ಮುಂಬರುವ ಗದ್ಯಕಾರರ ಪ್ರಗತಿ ಎಲ್ಲವನ್ನೂ ಮೂರೇ ವಾರದಲ್ಲಿ ಮನ ಹಿಡಿಯುವಂತೆ ಹೇಳಿ ಕೊಟ್ಟರು.

ಈಗ ನಾನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿ ಸಂಗೀತದ ಸ್ವರೂಪವನ್ನು ಭಾಷಣ ಮಾಡಿದರೆ ಜನಸ್ತೋಮವೇ ಸುಸ್ತು.

ಸಂಗೀತದ ಸಮ್ಮೇಳನದಲ್ಲಿ ಸಾಹಿತ್ಯದ ಸ್ವರೂಪ ವಿಶದೀಕರಿಸಿದರೆ, ಜನ ತಲೆ ಆಡಿಸಿದ್ದೂ ಆಡಿನಷ್ಟೇ!

ಏನು ಬೃಹದ್ ಬುದ್ಧಿಯಯ್ಯಾ ಇವನದು! ಎಂದೇ ಕಾರ್ಯದರ್ಶಿಗಳು ನನ್ನ ಐನೂರು ರೂಪಾಯಿನ ಚೆಕ್ಕನ್ನು ಎದುರುಗೊಳ್ಳುವುದು.

• • •


ಈ ಅದಲು ಬದಲು ಈಗ ಮೂಲತಃ ಗೊತ್ತಾಯಿತು ನನಗೆ ಇಷ್ಟು ದಿವಸ ಹಣ ಸಂಪಾದಿಸಿದೆ, ಧರ್ಮಾರ್ಥದ ಮೂಲಕ. ಇನ್ನು ಮೇಲೆ ಹಣ ಖರ್ಚು ಮಾಡಬೇಕು, ದೇಶದ ಹಣವನ್ನು— ಯಶಸ್ವಿಯಾಗಿ ಬಾಳಬೇಕಾದರೆ ಜೀವನ ಮಂತ್ರ "ಅದಲು ಹಾಗೂ ಬದಲು".

• • •

ಈಗ ನಾನು ನವದೇಶದ ಆರ್ಥಿಕ ಸಚಿವ.

ಬೆಳ್ಳಿ ಕೋಲು ಹಿಡಿದು, ಚಿನ್ನದ ಡವಾಲಿ ಧರಿಸಿ ಜನ ನನ್ನ ಮುಂದೆ ಓಡುತ್ತಾರೆ

• • •



# ರಾಷ್ಟ್ರೀಕರಣ

ರಾಜೀವ ಪುರದಲ್ಲಿ ವೈದ್ಯಕೀಯವನ್ನೆಲ್ಲಾ ರಾಷ್ಟ್ರೀಕರಣ ಮಾಡಬೇಕೆಂದು, ಭಯಂಕರ ಚಳುವಳಿ ಆರಂಭವಾಗಿದೆಯಂತೆ ಇದನ್ನು ಸ್ವತಃ ವಿಚಾರಿಸಲು ನಾವು ನಮ್ಮ ಸ್ವಂತ ಬಾತ್ಮೀದಾರರನ್ನು ಅಲ್ಲಿಗೆ ಕಳಿಸಿದೆವು. ಆತ ಬರೆದ ಲೇಖನ ಇದು—

"ಇಲ್ಲಿ ದೇಶೀಯ ವೈದ್ಯಕೀಯ ಮಾರ್ಗಗಳಲ್ಲಿ ಜನರೆಲ್ಲರೂ ಮೋಹಗೊಂಡಿದ್ದಾರೆ. ಹೆಚ್ಚು ಖಾಯಿಲೆ ಬಂದರೆ ಹೇಗೂ ಹೊರಗಿನವರಿಗೆ ಹೋಗಬೇಕು. ಚಿಕ್ಕಪುಟ್ಟ ಖಾಯಿಲೆಗಳಿಗೆ ಈ ಊರೇ ಚೆನ್ನ, ದೇಶೀಯ ಮಾರ್ಗವೇ ಒಳ್ಳೆಯದು ಎಂದು ಜನ ಹೇಳುತ್ತಿದ್ದಾರೆ.

ಹಾಗಾಗಿ, ಇಲ್ಲಿನ ಶಾಸ್ತ್ರೀಯ ವೈದ್ಯರಿಗೆ ಹೊಟ್ಟೆಗಿಲ್ಲದೆ ಹೊಟ್ಟೆ ಉರಿಯುತ್ತಿದೆ. ಅವರೇ ಈ ಚಳುವಳಿ ನಡೆಸುತ್ತಿದ್ದಾರೆ ಎಂದು ಪ್ರಬಲವಾದ ವದಂತಿ ಇದೆ."

ಇದ್ಯಾಕೋ ಈ ಚಳುವಳಿ. ಆ ಶಾಸ್ತ್ರೀಯ ವೈದ್ಯರು ನಮ್ಮೂರಿಗೆ ಬಂದು ಸೊಂಪಾಗಿರಬಾರದೇ ? ಇಂತಹಾ ರಾಜೀವ ಪುರದಲ್ಲಿ ಏನು ಇವರಿಗೆ ಚಪ್ಪೋದು?



**ಕಾಳಸಂತೆ ದೋಸೆ ರುಚಿ ಅಂತ ತಿಂದರೆ,**
**ಕಲ್ಲು ಹಲ್ಲು ಮುರಿಯೋದೇ ?**

# "ಒಂದೇ ಪತ್ರ"

ಸ್ವಾಮಿ ! ಓದುಗರೇ !

ಚಪ್ಪಲೀನ ಎತ್ತಿದೆ ಎಡಗೈಯಿಂದ, ಹೊಡೆದು ಕೊಂದುಹಾಕಿ ಬಿಡೋಣ ಹಾಳು ಕೆಂಪಿರುವೇನ, ಸುಂಕದ ಬಿಲ್ಲು ನೋಡುತ್ತಾ ಇದ್ದ ಕಸ ಸಿವಿಪದಲ್ಲಿ ಕಾಲನ್ನೇ ಕಟಕಾರಿಸಿಬಿಟ್ಟಿದೆ ಆ ಸುಂಕದವನಿಗಿಂತ ಈ ಕೆಂಪಿರುವೆ ಕ್ರೂರವಾಗಿ ಮೊಟಕಿಸುತ್ತಲ್ಲಾ ! ಇದನ್ನಾದರೂ ಹರೋಹರ ಅನ್ನಿಸೋಣ ಅಂತ.

ಕೂಡಲೇ ಒಂದು ಯೋಚನೆ ಹೊಳೆಯಿತು. ಈ ಒಂದು ಇರುವೇನ ಹೊಡೆದರೇನು ಬಂತು. ಇದು ವ್ಯಕ್ತಿಯ ದೋಷವಲ್ಲ. ಇದು ಆ ಸಮಾಜದ ದೋಷ. ಆ ಸಮಾಜವನ್ನೇ ಹೊಡೆದುಹಾಕಿದರೆ ಮುಂದಕ್ಕೆ ಉಪಯೋಗ್ಯ ಎನ್ನುವ ಗಂಭೀರವಾದ ಯೋಚನೆ ಹೊಳೆಯಿತು. ಪರಶಿವ ಮೂರನೇ ಕಣ್ಣು ಬಿಟ್ಟಂತಾಯಿತು.

ಚಪ್ಪಲಿ ಎತ್ತಿದ ಕೈ ಒಗ್ಗಿಸಿದೆ. ಆ ಕೆಂಪಿರುವೆ ಯಾವ ಗೂಡಿಗೆ ಹೋಗುತ್ತೆ ಎಂದು ಮೆಲ್ಲಗೆ ಅದನ್ನೇ ನೋಟದಿಂದ ಹಿಂಬಾಲಿಸಿದೆ ಎಲ್ಲಿಗೆ ಹೋಯ್ತು ಗೊತ್ತೆ. ಬಾಗಿಲ ಸಂದಿ ಗೂಡಿಗೆ.

ನನ್ನ ಕಾರ್ಯಕ್ರಮವನ್ನು ಏರ್ಪಡಿಸಿದೆ. ಸಮರವ್ಯೂಹ ರಚಿಸಿದೆ. ಆ ಗೂಡಿನ ಬಾಯಿಯ ಸುತ್ತ ಒಂದಡಿ ಅಗಲ ಒಂದು ಸಣ್ಣ ಗೋಡೆ ಕಟ್ಟಿದೆ. ಅದರ ಮೇಲೆಲ್ಲಾ ಡಿ ಡಿ ಟಿ. ಚೆಲ್ಲಿದೆ. ಒಂದು ಫ್ಲಿಟ್ ಬಂದೂಕ ಬಾರು ಮಾಡಿದೆ ಛತ್ರಿಕಡ್ಡಿ, ರಬ್ಬರ ಇತ್ಯಾದಿ ನವ ಆಯುಧಗಳಿಂದ ಗೂಡಿನ ಬಾಯಿ ಬಿಗಿಸಿದೆ.

ಒಳ್ಳೇ ಪೆಟ್ಟಿ ಸಂದಿ ಒಸಂದಿ ಇದ್ದರಾದ್ದ ಆ ಗೂಡಿನ ಮೂಲೆ ಮೂಲೆಯನ್ನೂ ಕೆದಕಿದೆ. ಶತ್ರುವಿನ ಒಳಕೋಟೆ ಬಾಗಿಲಿನ ಕೆಳಗಿತ್ತು. ಅದನ್ನೂ ಭೇದಿಸಿದೆ. ಶತ್ರು ನಿರ್ಮೂಲ ಫ್ಲಿಟ್ ಅಣುಬಾಂಬಿನ ಮೂಲಕ ಸಾಧಿಸಿದೆ. ಎಲ್ಲಾ ಕೆದರಿದರೆ ಒಳಗೆ ಏನು ಸಿಕ್ಕಿತು ಗೊತ್ತೆ, ಅಕ್ಕಿಕಾಳು, ಒಂದೊಂದಾಗಿ ಸಿಕ್ಕಿತು.

ಹುಷಾರಾಗಿ ಅಕ್ಕಿಕಾಳನ್ನೆಲ್ಲಾ ಕೂಡಿಟ್ಟೆ. ರೇಷನ್ ಅಂಗಡಿಯಲಿ ಕ್ಯೂ ನಿಂತು ಕಾದು, ಘನಸರ್ಕಾರ ಹಂಚಿಕೆ ಮಾಡಿದ ಅರೆಪಾವು ಅಕ್ಕೀನ ಪೂಜಾರಿ ನೌಕರ ಅರಿ ಅಳೆದುಕೊಡುತ್ತಾನಲ್ಲ. ಆ ಲೆಕ್ಕದ ಪ್ರಕಾರ, ಒಂದು ಗಂಟೆಗೆ

ನಾನೂರು ಅಕ್ಕಿ ಕಾಳು ದೊರೆಯುತ್ತಿ. ಅದಗೆ ಈ ಇರುವೆ ಗೂಡು ಅರ್ಧಗಂಟೆ ಕೆದಕಿದ್ದಕ್ಕೆ ಎಷ್ಟು ಅಕ್ಕಿ ಕಾಳು ಸಿಕ್ಕಿತು ಗೊತ್ತೆ. ಸಾವಿರದ ಇನ್ನೂರು ಒಂದಾ ಕಾಳು. ಅಂದರೆ ರೇಷನ್ ಆಫೀಸಿನಲ್ಲಿ ಆರು ಗಂಟೆ ಆಯುಸ್ಸು ಕಳೆಯುವುದೂ ಒಂದೆ. ಒಂದು ಸಾಮಾನ್ಯ ಇರುವೆ ಗೂಡನ್ನು ಒಂದು ಗಂಟೆ ಕೆದಕುವುದೂ ಒಂದೇ.

ಸುಬ್ಬಗೀನ ಶಿಕಾರಿ ಮಾಡುವಾಗ ಮರಿ ಹಕ್ಕಿಯನ್ನು ಕಂಡು ಮರುಗಿ ತಾಯಿ ಹಕ್ಕಿಯನ್ನು ಬಿಟ್ಟನಂತೆ ಅಥವಾ ಅಪೇರೀತಿ ಏನೋ ಮಾಡಿದನಂತೆ ಉತ್ತರ ಅವನಿಗೆ ಸ್ವರ್ಗಸುಖ ದೊರಕಿತಂತೆ.

ಅವನ ಜ್ಞಾಪಕ ಬಂತು ಒಂದು ಇರುವೆ ಪ್ರಾಣ ಉಳಿಸಿದ್ದಕ್ಕಾಗಿ ಭಗವಂತ ಎರಡು ದಿವಸದ ಅನ್ನ ಒದಗಿಸಿಕೊಟ್ಟಿದ್ದ.

ದೇವ ಮಹಿಮೆ ; ಕಲಿಯುಗದಲ್ಲಿ !

ದೇವರ ವರ ಪಡೆದವರು ಸಾಮಾನ್ಯ ಜನರಿಗೆ ಸಮಾಜಕ್ಕೆ ಆ ಸುಖವನ್ನು ದಯಪಾಲಿಸಬೇಕಂತೆ. ಆಗ ಸುಖ ಇಮ್ಮಡಿಯಾಗುತ್ತಂತೆ.

ಆದಕ್ಕೇ ಈ ಲೇಖನ ಬರೆದು ಓದುಗರಿಗೆಲ್ಲಾ ಇನ್ನು ಮೇಲೆ ಕೆಂಪಿರುವೇ ಗೂಡಿನ ಶಿಕಾರಿಯಿಂದಲೋ, ಅಪೇರೀತಿ, ಕಗ್ಗಣಗಳ ಗುಡಾಣದ ಬೇಟೆಯಿಂದಲೋ, ತದ್ರೀತಿ ರೇಷನ್ ನೌಕರರ ಗುಪ್ತ ಬಿಲಗಳ ಶೋಧನೆಯಿಂದಲೋ, ತಮ್ಮ ಅನ್ನಾಹಾರಗಳನ್ನೂ ದೊರಕಿಸಿಕೊಂಡು, ಭಾರತ ಸರ್ಕಾರಕ್ಕೆ ಈಗ ಬಂದಿರುವ ವಿಷನಿಮಿಷದಲ್ಲಿ ಬೆಂಬಲ ಕೊಡಬೇಕೆಂದು ಬೇಡುವ,

ನಿಮ್ಮ ಅನ್ನಾಭಿಲಾಷಿ.

— ಶಿವಣ್ಣ.

* * * *

ಕಾಲೇಜ್ ವಿದ್ಯಾರ್ಥಿನಿಯರಲ್ಲಿ ಈಗ ಎರಡು ಪಂಗಡಗಳಾಗಿದೆಯಂತೆ—

— ಉಗುರಿಗೆ ಕೆಂಪು ಬಣ್ಣ ಹಚ್ಚುವವರು—

ದೇಶವಾತ್ಸಲ್ಯದಿಂದ ತ್ರಿವರ್ಣ ಹಚ್ಚುವವರು ಎಂದು

* * *

"ಶೂನ್ಯ ಮನಸ್ಸಿನಿಂದಾಗುವ ಪ್ರಯೋಜನಗಳು ಎಂದು ಯಾರೋ ಭಾಷಣ ಮಾಡಿದರಂತೆ ''.

— ಒಂದು ಪ್ರಯೋಜನ ಅರ್ಥವಾಯಿತು— ಭಾಷಣ ಮಾಡಲು ಸಹಾಯ.

* * * *